DOP 15th of every month from Udupi HPO
ಬೆಲೆ ರೂ.2.50

**ಹೆಬ್ಬಾರ್ ಎಂಟರ್‌ಪ್ರೈಸಸ್**
ಭೂವರಾಹ ಕಾಂಪ್ಲೆಕ್ಸ್, ವಾದಿರಾಜ ರಸ್ತೆ, ಉಡುಪಿ - 576 101.
ಶುಭ ಸಮಾರಂಭಗಳಿಗೆ ಬೇಕಾಗುವ ಕ್ಯಾಟರಿಂಗ್ ವ್ಯವಸ್ಥೆ, ಶಾಮಿಯಾನ, ಗ್ಯಾಸ್ ಸ್ಟವ್, ಟೇಬಲ್, ಕುರ್ಚಿ, ಪಾತ್ರೆಗಳು ಹಾಗೂ ಇನ್ನಿತರ ಎಲ್ಲಾ ವ್ಯವಸ್ಥೆಗಳನ್ನೂ ಸಕಾಲದಲ್ಲಿ ಒದಗಿಸಲಾಗುವುದು.
ಫೋನ್ : 2531493 (O), 2530851 (R), ಮೊಬೈಲ್ : 94484 37893

# ಶ್ರೀ ಶಾರದಾ

ಮಾಸಪತ್ರಿಕೆ - 15 ಮೇ 2009

॥ ಧಿಯೋ ಯೋನಃ ಪ್ರಚೋದಯಾತ್ ॥

Regn.No.KAR/KAN/2000/2758 ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.) ಶ್ರೀ ಶಾರದಾ ಮಂಟಪ, ಕುಂಜಿಬೆಟ್ಟು, ಉಡುಪಿ - 576 102. ☎ 2520754

ಸಂಪುಟ-9 ಸಂಚಿಕೆ-5 ಪುಟಗಳು-6 Registered Under No.J/UDP/1260/2009-2011 Dated from 01-12-2008 to 30-11-2011.

## ಶ್ರೀಶಾರದಾ ಮಂಟಪದಲ್ಲಿ ಸಾಮೂಹಿಕ ಉಪನಯನ ಹಾಗೂ ಶಂಕರ ಜಯಂತಿ ಆಚರಣೆ



''ಸಮಸ್ತ ಮಾನವರಲ್ಲಿ, ಜೀವಜಾಲದಲ್ಲಿ ಸಮಾನತೆಯನ್ನು, ಏಕತೆಯನ್ನು ಪ್ರತಿಪಾದಿಸಿದ ಆಚಾರ್ಯ ಶಂಕರರು ಜಾತಿ ವರ್ಣಗಳ ಭೇದಗಳನ್ನು ಅಲ್ಲಗಳೆದರು. ವಿವಿಧ ದೇವತೆಗಳ ಆರಾಧನೆಯನ್ನು ಸಮನ್ವಯಗೊಳಿಸಿದರು, ಆಗ ವಿಜೃಂಭಿಸತೊಡಗಿದ್ದ ಬೌದ್ಧ ಮತವನ್ನು ಸಪ್ರಮಾಣವಾಗಿ ಖಂಡಿಸಿ ಸನಾತನ ಧರ್ಮದ ತತ್ವಗಳನ್ನು ಭಾರತದಾದ್ಯಂತ ಪ್ರಚಾರ ಪಡಿಸಿದರು. ಇದಕ್ಕಾಗಿ ದೇಶದ ನಾಲ್ಕು ದಿಕ್ಕುಗಳಲ್ಲಿ ಮಠಗಳನ್ನು ಸ್ಥಾಪಿಸಿ ನಿರಂತರ ಈ ಪ್ರಯತ್ನ ಸಾಗುವಂತೆ ಶಾಶ್ವತ ಅಸ್ತಿವಾರ ಹಾಕಿದ ಅವರ ಜೀವನ ಮತ್ತು ತತ್ವಗಳು ಎಂದೆಂದಿಗೂ ಪ್ರಸ್ತುತವೆನಿಸುತ್ತವೆ'' ಎಂದು ರಾಮಚಂದ್ರಾಪುರ ಮಠದ ಭಾರತೀಗುರುಕುಲದ ಪ್ರಾಚಾರ್ಯ ಶ್ರೀ ಗಜಾನನ ಭಟ್ಟ ಅವರು 'ಶಂಕರರ ಪ್ರಸ್ತುತತೆ'ಯ ಕುರಿತು ಸುದೀರ್ಘವಾಗಿ ವಿಶ್ಲೇಷಿಸಿದರು. ಕುಂಜಿಬೆಟ್ಟಿನ ಜ್ಞಾನಭಾರತಿ ಮತ್ತು ಸ್ಥಾನಿಕ ಬ್ರಾಹ್ಮಣ ಸಂಘವು ಸಂಯುಕ್ತವಾಗಿ ಆಯೋಜಿಸಿದ್ದ ಶಂಕರಜಯಂತಿ ಸಮಾರಂಭದಲ್ಲಿ ಅವರು ಪ್ರವಚನ ನೀಡಿದರು. ಅಧ್ಯಕ್ಷತೆ ವಹಿಸಿದ್ದ ಕವಿ, ಬರೆಹಗಾರ ಶ್ರೀ ಮು.ನಾ.ಹೆಬ್ಬಾರರು ಆಚಾರ್ಯ ಶಂಕರರ ಜೀವನ ಸಾಧನೆಗಳನ್ನು ವಿವರಿಸಿದರು. ''ಕಾಲ್ನಡಿಗೆಯಲ್ಲೇ ಅಖಂಡ ಭಾರತ ಸಂಚಾರ ಮಾಡಿ ಜೈನರು, ಬೌದ್ಧರು, ಗಾಣಪತ್ಯರು ಮೊದಲಾದ ಭಿನ್ನ ಸಂಪ್ರದಾಯ ವಾದಿಗಳಿಂದ ಸನಾತನ ಧರ್ಮಕ್ಕೆ ಒದಗಿದ ದುರಂತವನ್ನು ತಪ್ಪಿಸಿ ಸನಾತನ ಧರ್ಮವನ್ನು ರಕ್ಷಿಸಿದರು. ಷಣ್ಮತ ಸ್ಥಾಪನಾಚಾರ್ಯ ಎಂದೆನಿಸಿದ ಶಂಕರರು ಪಂಚಾಯತನ ಪೂಜಾಪದ್ಧತಿಯನ್ನು ಆಚರಣೆಗೆ ತಂದು ವಿವಿಧ ದೇವರುಗಳನ್ನು ಆರಾಧಿಸುತ್ತಿದ್ದ ಜನ ಒಂದುಗೂಡಿ ಬಾಳುವಂತೆ ಮಾಡಿದರು. ಪುರಾಣ, ಉಪನಿಷತ್ತುಗಳನ್ನು ರಚಿಸಿದ ಋಷಿ-ಮುನಿಗಳ ಸಾಲಿನಲ್ಲಿ ನಿಲ್ಲಬಲ್ಲ ಶ್ರೇಷ್ಠರು ಶಂಕರಾಚಾರ್ಯರು'' ಎಂದು ಅವರು ತಿಳಿಸಿದರು.

ಜ್ಞಾನಭಾರತಿ ಮತ್ತು ಸ್ಥಾನಿಕ ಬ್ರಾಹ್ಮಣ ಸಂಘದ ಅಧ್ಯಕ್ಷರಾದ ಶ್ರೀ ಸಿ.ಎಸ್.ರಾವ್ ಅವರು ಮೊದಲಲ್ಲಿ ಸ್ವಾಗತಿಸಿದರು. ಸಮಾರಂಭದ ಮೊದಲು ಮಾತೆಯರಿಂದ 'ಸೌಂದರ್ಯಲಹರೀ' ಪಾರಾಯಣವಿತ್ತು. 'ಜ್ಞಾನಭಾರತಿ'ಯ ಕಾರ್ಯದರ್ಶಿಗಳಾದ ಪೂರ್ಣಪ್ರಜ್ಞ ಕಾಲೇಜಿನ ನಿವೃತ್ತ ಪ್ರಾಂಶುಪಾಲ ಡಾ। ಎಸ್.ಎಲ್.ಕಾರ್ಣಿಕರು ಧನ್ಯವಾದ ಸಮರ್ಪಿಸಿದರು. ಸ್ಥಾನಿಕ ಬ್ರಾಹ್ಮಣ ಸಂಘದ ಕಾರ್ಯದರ್ಶಿ ಶ್ರೀ ವೇಣುಗೋಪಾಲ ರಾಯರು ಕಾರ್ಯಕ್ರಮ ನಿರ್ವಹಿಸಿದರು.

ಕೊನೆಯಲ್ಲಿ ಶಾರದಾ ಪೂಜೆ ಪ್ರಸಾದ ವಿತರಣೆಗಳೊಂದಿಗೆ 'ಶಂಕರ ಜಯಂತಿ' ಸರಳ ಸಮಾರಂಭವು ಯಶಸ್ವಿಯಾಗಿ ಸಂಪನ್ನವಾಯಿತು.

ವರದಿ : **ಡಾ। ಎಸ್.ಎಲ್.ಕಾರ್ಣಿಕ್**

**ಶ್ರೀಶಾರದಾ ಮಂಟಪದಲ್ಲಿ ಸಾಮೂಹಿಕ ಉಪನಯನ :**

ಶ್ರೀಶಂಕರ ಜಯಂತಿಯ ಶುಭ ಸಂದರ್ಭದಲ್ಲಿ ಶ್ರೀಶಾರದಾ ಮಂದಿರದಲ್ಲಿ ಇಬ್ಬರು ವಟುಗಳಿಗೆ ಶ್ರೀ ನಾಗಭೂಷಣ ಶಾಸ್ತ್ರಿ ಹಾಗೂ ಶ್ರೀ ಸುಬ್ರಹ್ಮಣ್ಯ ಭಟ್ ಇವರ ಪೌರೋಹಿತ್ಯದಲ್ಲಿ ಬೆಳಿಗ್ಗೆ 7-55ರ ಶುಭ ಮುಹೂರ್ತದಲ್ಲಿ ಬ್ರಹ್ಮೋಪದೇಶ ನೀಡಲಾಯಿತು. ಈ ಕಾರ್ಯಕ್ರಮದಲ್ಲಿ ವಟುಗಳ ಸಂಬಂಧಿಕರು ಹಾಗೂ ಸಂಘದ ಪದಾಧಿಕಾರಿಗಳು, ಸದಸ್ಯರು ಮತ್ತು ಜ್ಞಾನಭಾರತಿಯ ಸದಸ್ಯರು ಪಾಲ್ಗೊಂಡರು. ಬಳಿಕ ಶ್ರೀಶಾರದಾ ಮಂದಿರದಲ್ಲಿ ಶ್ರೀಶಾರದಾ ಮಾತೆ, ಶ್ರೀಗಣಪತಿ ಹಾಗೂ ಶ್ರೀಶಂಕರರಿಗೆ ವಿಶೇಷ ಪೂಜಾ ಕಾರ್ಯಕ್ರಮಗಳು ನೆರವೇರಿತು. ಈ ಸಂದರ್ಭದಲ್ಲಿ ಶಂಕರಾಚಾರ್ಯರ ಶ್ಲೋಕಗಳ ಪಠನ, ಲಲಿತಾ ಸಹಸ್ರನಾಮ ವಾಚನ ಹಾಗೂ ಸೌಂದರ್ಯಲಹರೀ ಸ್ತೋತ್ರಗಳನ್ನು ಸಾಮೂಹಿಕವಾಗಿ ವಾಚಿಸಲಾಯಿತು. ಮಧ್ಯಾಹ್ನ ಮಹಾಮಂಗಳಾರತಿ, ಪ್ರಸಾದ

(4ನೇ ಪುಟಕ್ಕೆ ...)

## ಉಡುಪಿ-ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಸಹಕಾರ ರಂಗ ಸ್ವಸ್ಥವಾಗಿದೆ-ಡಾ। ನಿ.ಬೀ.ವಿಜಯ ಬಲ್ಲಾಳ್






ಭಾರತ ದೇಶದಲ್ಲಿ ಸಹಕಾರ ಚಳುವಳಿ ಆರಂಭವಾಗಿ ನೂರು ವರ್ಷಗಳೇ ಕಳೆದಿವೆ. ದೇಶಾದ್ಯಂತ ಈ ಚಳುವಳಿ ಪ್ರಬಲವಾಗಿ ಬೆಳೆದಿದೆ. ಹೈನುಗಾರಿಕೆ, ವ್ಯವಸಾಯ, ಆರ್ಥಿಕ ವ್ಯವಹಾರಗಳೂ ಸಹಕಾರದ ತಳಹದಿಯಲ್ಲಿ ಪ್ರಗತಿಪರವಾಗಿ ಮುನ್ನಡೆದಿವೆ. ಇದಕ್ಕೆ ಸಂಘಗಳಲ್ಲಿ ಸದಸ್ಯರ ಬೆಂಬಲದ ಜತೆಗೆ ಆಡಳಿತ ವರ್ಗದಲ್ಲಿ ಪ್ರಾಮಾಣಿಕತೆ ಮತ್ತು ನೈತಿಕತೆ ಅತ್ಯಗತ್ಯ. ಈ ಮೌಲ್ಯಗಳು ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಅಪೂರ್ವವಾಗಿ ಪ್ರಕಟಗೊಂಡಿವೆ. ಆದ್ದರಿಂದಲೇ ಇಲ್ಲಿ ಸಹಕಾರ ಸಂಘಗಳು, ಬ್ಯಾಂಕುಗಳು ಉತ್ತಮವಾಗಿ ಕಾರ್ಯನಿರ್ವಹಿಸಿ ಬೆಳೆಯುತ್ತಿವೆ. ಇಲ್ಲಿ ಮೊಳಹಳ್ಳಿ ಶಿವರಾಯರು, ಬಂಟ್ವಾಳ ನಾರಾಯಣ ನಾಯಕ್ ಮೊದಲಾದ ಸಹಕಾರಿಗಳು ಸಲ್ಲಿಸಿದ ಸೇವೆಯನ್ನು ಸಹಕಾರ ರಂಗ ಮರೆಯುವಂತಿಲ್ಲ. ಬೇರೆ ಜಿಲ್ಲೆಗಳು ಮತ್ತು ರಾಜ್ಯಗಳಲ್ಲಿ ಸಹಕಾರ ರಂಗ ಹಾಗೂ ಸಂಸ್ಥೆಗಳು ಸೊರಗಿ ನಶಿಸಿ ಹೋದ ಸಾಕಷ್ಟು ಉದಾಹರಣೆಗಳಿವೆ. ಶ್ರೀಶಾರದಾ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ಒಂದು ಆದರ್ಶ ಸಂಘವಾಗಿ ಬೆಳೆಯಲು ಇದಕ್ಕೆ ಸದಸ್ಯರ ಪ್ರೋತ್ಸಾಹ, ಆಡಳಿತ ಮತ್ತು ಸಿಬ್ಬಂದಿವರ್ಗದ ಪರಿಶ್ರಮ ಮತ್ತು ಪ್ರಾಮಾಣಿಕತೆ ಕಾರಣ ಎಂದು ಅಂಬಲಪಾಡಿ ಶ್ರೀ ಜನಾರ್ದನ ಮಹಾಕಾಳಿ ದೇವಸ್ಥಾನದ ಧರ್ಮದರ್ಶಿ ಡಾ। ನಿ.ಬೀ. ವಿಜಯಬಲ್ಲಾಳರು ಹೇಳಿದರು,. ಅವರು ತಾ.19-4-2009ರಂದು ಶ್ರೀಶಾರದಾ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿಯ ಕುಕ್ಕಿಕಟ್ಟೆ ಶಾಖೆಯನ್ನು ಉದ್ಘಾಟಿಸಿ ಮಾತನಾಡುತ್ತಿದ್ದರು.

ಮುಖ್ಯ ಅತಿಥಿಯಾಗಿ ಬಂದ ಉದ್ಯಮಿ ಅಲೆವೂರು ಗಣಪತಿ ಕಿಣಿ ಸೊಸೈಟಿಗೆ ಶುಭಕೋರಿ ಮಾತನಾಡಿ ಸೊಸೈಟಿಗಳು ಲಾಭದಾಯಕವಾಗಿ ನಡೆದರೆ ಸದಸ್ಯರಿಗೇ ಲಾಭ ಎಂದರು.

ಮುಂಬಯಿಯಲ್ಲಿ ವೈದ್ಯವೃತ್ತಿ ನಡೆಸುತ್ತಿರುವ ಡಾ। ಪಿ.ಜಿ.ರಾಯರು ಅಧ್ಯಕ್ಷತೆ ವಹಿಸಿ ಮಾತನಾಡಿ ಶ್ರೀಶಾರದಾ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ಏಳು ವರ್ಷಗಳ ಹಿಂದೆ ಉತ್ಸಾಹಿ ಯುವ ಸಹಕಾರಿಗಳ ಕನಸಿನ ಕೂಸಾಗಿ ಜನಿಸಿ ಪ್ರಗತಿ ಪಥದಲ್ಲಿ ಸಾಗುತ್ತಿದೆ. ಕುಕ್ಕಿಕಟ್ಟೆಯಲ್ಲಿ ಹೊಸದಾಗಿ ಆರಂಭಿಸಿರುವ ಶಾಖೆ ಅವರ ಸಾಧನೆಯ ಸಣ್ಣ ಮೈಲಿಗಲ್ಲು. ಸತತ ಲಾಭದಾಯಕವಾಗಿ ನಡೆದು ಬರುತ್ತಿರುವ ಸಂಸ್ಥೆ ಸಹಕಾರ ರಂಗದಲ್ಲಿ ಹೆಚ್ಚಿನ ಸಾಧನೆ ಮಾಡಿ, ಸದಸ್ಯರ ಮತ್ತು ಗ್ರಾಹಕರ ಮನೋಭಾವನೆಯನ್ನು ಅರ್ಥೈಸಿಕೊಂಡು ಬೆಳಗಲಿ ಎಂದರು. ಕು। ಪ್ರಮೋದಿನಿಯ ಪ್ರಾರ್ಥನೆಯೊಂದಿಗೆ ಸಭಾಕಾರ್ಯಕ್ರಮ ಆರಂಭವಾಗಿತ್ತು. ಸೊಸೈಟಿಯ ಅಧ್ಯಕ್ಷರಾದ ಶ್ರೀ ಎಂ.ಸದಾನಂದರಾಯರು ಸ್ವಾಗತಿಸಿ ಶ್ರೀಶಾರದಾ ಕ್ರೆಡಿಟ್ ಕೋ-ಅಪರೇಟಿವ್ ಸೊಸೈಟಿಯ ಸ್ಥಾಪನೆ, ಬೆಳೆದು ಬಂದ ಬಗೆಯನ್ನು ವಿವರಿಸಿದರು. ಶಾಖಾ ವ್ಯವಸ್ಥಾಪಕ ಕೆ. ವಿಶ್ವನಾಥ ರಾವ್ ವಂದಿಸಿದರು. ಸೊಸೈಟಿಯ ಕಾರ್ಯದರ್ಶಿ ಕೆ. ವೇಣುಗೋಪಾಲರಾವ್ ಕಾರ್ಯಕ್ರಮ ನಿರೂಪಿಸಿದರು. ಬೆಳಿಗ್ಗೆ 7 ಗಂಟೆಯಿಂದ ಶಾಖಾ ಕಟ್ಟಡದಲ್ಲಿ ಋತ್ವಿಜರಿಂದ ಗಣಹೋಮ ಕಾರ್ಯಕ್ರಮ ನಡೆದಿತ್ತು.

**ಸಂಪಾದಕ ಮಂಡಳಿ**

ವೈ. ಮೋಹನ ರಾವ್
ಯು. ಅರವಿಂದ ಕುಮಾರ್
ಎಚ್.ಎನ್. ಶ್ಯಾನುಭಾಗ್
ಟಿ. ವಿಶ್ವನಾಥ ಶ್ಯಾನುಭಾಗ್
ಪ್ರಕಾಶ್ ರಾವ್ ಕೋಲ್ಪೆ
ಟಿ. ಸುರೇಶ ರಾವ್
ರೂಪಾ ವಸಂತ ರಾವ್
ಕೃಷ್ಣಕುಮಾರ್ ರಾವ್, ಮಟ್ಟು
ಕೆ. ವೇಣುಗೋಪಾಲ ರಾವ್
ಯು. ಪ್ರಫುಲ್ಲಚಂದ್ರ ರಾವ್

ಈ ಪತ್ರಿಕೆಯಲ್ಲಿ ಪ್ರಕಟವಾಗುವ ಲೇಖನಗಳಲ್ಲಿ ಅಭಿವ್ಯಕ್ತವಾಗುವ ಅಭಿಪ್ರಾಯಗಳು, ಅನಿಸಿಕೆಗಳು ಲೇಖಕರ ಸ್ವಂತ ಅಭಿಪ್ರಾಯಗಳೇ ಹೊರತು ಅವು ಪತ್ರಿಕೆಯ ಸಂಪಾದಕರ, ಪ್ರಕಾಶಕರ ಅಭಿಪ್ರಾಯವಾಗಿರಬೇಕಾಗಿಲ್ಲ.

ಲೇಖನಗಳು ಅಥವಾ ಪತ್ರಿಕೆಯ ಇತರ ಯಾವುದೇ ವಿಷಯಗಳ ಬಗ್ಗೆ ಯಾವುದೇ ಅನಿಸಿಕೆಗಳನ್ನು ವಾಚಕರು ನಿಸ್ಸಂಕೋಚವಾಗಿ ಪತ್ರ ಮುಖೇನ ಸಂಪಾದಕ ಮಂಡಳಿಗೆ ತಿಳಿಸಬಹುದು.

-ಸಂ.

## ಚಿಂತನ

ಭಾರತೀಯ ಸಂಸ್ಕೃತಿಯಲ್ಲಿ ಶ್ರೀಕೃಷ್ಣನ ಸ್ಥಾನ ಬಹಳ ಶ್ರೇಷ್ಠವಾದುದು. ಆಧ್ಯಾತ್ಮಿಕ, ನೈತಿಕ, ಬೌದ್ಧಿಕ ಹಾಗೂ ಕ್ರಿಯಾತ್ಮಕವಾದ ಯಾವುದೇ ಚಟುವಟಿಕೆಗಳಿಗೆ ಸಂಬಂಧಿಸಿದ ಯಾವುದೇ ಪ್ರಶ್ನೆಗಳಿಗೂ ಆತನ ಜೀವನವು ಒಂದು ಆದರ್ಶವಾಗಿದೆ. ಅಹಂಕಾರಿಯೂ, ಅವಿವೇಕಿಯೂ ಆದ ತನ್ನ ಮಾವ ಕಂಸನ ವಧೆ, ಕೈಲಾಗದವಳಾದ ಕುಬ್ಜೆಯ ಶಾಪ ವಿಮೋಚನೆ, ಬುದ್ಧಿಹೀನರೂ, ಸಾಮಾನ್ಯಜ್ಞಾನ ಇಲ್ಲದ ಗೋಪಿಕೆಯರ ವಸ್ತ್ರಾಪಹರಣ ಮಾಡಿದ್ದು, ಗರ್ವಿ ದೇವೇಂದ್ರನ ಗರ್ವಭಂಗ ಮಾಡಲು ಗೋವರ್ಧನ ಗಿರಿ ಎತ್ತಿದ್ದು, ಕಪಟಿಗಳಾದ ಬಕ, ಧೇನುಕ, ಪೂತನಿ ಮೊದಲಾದವರ ನಾಶ, ದುಷ್ಟರೂ, ಛಲ ಉಳ್ಳವರೂ ಆದ ಕೌರವರ ನಿರ್ನಾಮ, ಶಿಷ್ಟರಾದ ಪಾಂಡವರ ಪಾಲನೆ, ದೇವನಾದರೂ ಅರ್ಜುನನ ಸಾರಥಿಯಾಗಿ ಬಂಡಿ ಓಡಿಸಿದ್ದು.... ಹೀಗೆ ತನ್ನ ಎಲ್ಲಾ ಲೀಲೆಗಳಲ್ಲೂ ಪ್ರಪಂಚಕ್ಕೆ ಒಂದು ಆದರ್ಶವನ್ನು ಕರುಣಿಸಿದ್ದಾನೆ.

ಎಲ್ಲಕ್ಕಿಂತಲೂ ಪ್ರಾಮುಖ್ಯವಾದುದು ಅವನು ಪಾರ್ಥನಿಗೆ ಬೋಧಿಸಿದ ಗೀತೋಪದೇಶ. ಭಕ್ತಿ, ಕರ್ಮ, ತಾತ್ವಿಕ ಮತ್ತು ಶರಣಾಗತಿಯ ಸಿದ್ಧಾಂತಗಳ ಚೌಕಟ್ಟಿನಲ್ಲಿ ಬಂಧಿಸಲ್ಪಟ್ಟ ಆತನ ಮಾತುಗಳು ಭೂತ, ವರ್ತಮಾನ ಮಾತ್ರವಲ್ಲದೆ ಭವಿಷ್ಯದಲ್ಲೂ ಬಹಳ ಮೌಲ್ಯಯುತವಾದುವು.

ದೇಶ ವಿದೇಶಗಳ ಪಂಡಿತರನ್ನು ಅಬಾಲವೃದ್ಧರನ್ನು ಏಕ ರೀತಿಯಲ್ಲಿ ಆಕರ್ಷಿಸುವ ಹಾಗೂ ಕೆಲವೊಮ್ಮೆ ಬಲ್ಲವರನ್ನೂ ಮತ್ತೆ ಮತ್ತೆ ಪ್ರಶ್ನಿಸಿ, ಪ್ರಶ್ನಿಸಿದಷ್ಟೂ ವಿಶಾಲ ಅರ್ಥವನ್ನು ಕೊಡುವ ಮೋಹಕ, ಮನೋಜ್ಞವೆನಿಸಿದ ಈ ಭಗವದ್ಗೀತೆಯನ್ನು ಒಮ್ಮೆ ಓದಿದರೆ ಸಾಲದು. ಮತ್ತೆ ಮತ್ತೆ ಓದಿ ಅರ್ಥೈಸಿಕೊಳ್ಳಬೇಕಾದುದು ಅಗತ್ಯ.

ಹೀಗೆ ಓದುಗನ ಹೊರಗಣ್ಣಿಗೆ ಪಾಂಡವ-ಕೌರವರ ಕಥೆಯಾಗಿಯೂ, ಒಳಕಣ್ಣಿಗೆ ಮನುಕುಲದ ಉದ್ಧಾರಕ್ಕಾಗಿಯೂ, ತಿಳಿಗಣ್ಣಿಗೆ ಪರಮಾತ್ಮನ ಗುಣ ಗಾಥೆಯನ್ನೂ ವರ್ಣಿಸುವ ಭಗವದ್ಗೀತೆಯನ್ನು ಪ್ರತಿಯೊಬ್ಬರೂ ಅಧ್ಯಯನ ಮಾಡಬೇಕಾದುದು ಇಂದಿನ ಕಾಲದಲ್ಲಿ ಬಹಳ ಪ್ರಾಮುಖ್ಯ.

ಇಂದಿನ ಸಮಾಜದಲ್ಲಿ ನೈತಿಕ ಅಧಃಪತನದಿಂದ ಅದೆಷ್ಟು ಕ್ರೂರತೆ, ಅಸೌಜನ್ಯತೆ ಎದ್ದು ಕಾಣುತ್ತದೆ? ಈ ಬಗ್ಗೆ ನಾವು ಮಾಧ್ಯಮಗಳ ಮೂಲಕ ಸಾಕಷ್ಟು ನೋಡುತ್ತಿದ್ದೇವೆ. ಇದಕ್ಕೆಲ್ಲ ಪರಿಹಾರ ಗೀತೆಯ ಬಗ್ಗೆ ತಿಳುವಳಿಕೆ ಹೆಚ್ಚಿಸಿಕೊಳ್ಳುವುದು. ಚಿಕ್ಕವರಿರುವಾಗಲೇ ಈ ಗೀತೆಯ ಸಾರವನ್ನು ಮಕ್ಕಳಿಗೆ ಸ್ವಲ್ಪ ಸ್ವಲ್ಪವೇ ಅರ್ಥವಾಗುವಂತೆ ಮಾಡಿ, ಪ್ರಬುದ್ಧರಾದಾಗ ಇಡೀ ಭಗವದ್ಗೀತೆಯನ್ನು ತಿಳಿದುಕೊಳ್ಳುವಂತೆ ಆದರೆ ಸಮಾಜದಲ್ಲಿ ಆಗುವ ಈ ಅನಿಷ್ಟಗಳು ಕಡಿಮೆಯಾಗುವುದರಲ್ಲಿ ಸಂಶಯವಿಲ್ಲ.

# ಶ್ರೀ ಕೃಷ್ಣಾಯನ

## (ಶ್ರೀ ಮದ್ಭಾಗವತಾನುಸಾರಿ)



**– ಕೆ. ಆತ್ಮಾರಾಮ ಶಾಸ್ತ್ರೀ**
**ಬೆಂಗಳೂರು**

(ಹಿಂದಿನ ಸಂಚಿಕೆಯಿಂದ...)

.....ಮಗುವಿನ ಸಹಿತ ಹಿಂದಕ್ಕೆ ಬಂದ ವಸುದೇವನನ್ನು ನೋಡಿ ದೇವಕಿ, ತನ್ನ ಕಾರ್ಯದಲ್ಲಿ ವಸುದೇವನು ಸಫಲನಾಗದೆ ಹಿಂದಕ್ಕೆ ಬಂದಿರಬೇಕು ಎಂದು ಸಂದೇಹಪಟ್ಟಳು.

ಆದರೆ ತಂದದ್ದು ಹೆಣ್ಣು ಮಗುವೆಂದು ತಿಳಿದಾಗ ಸಮಾಧಾನಗೊಂಡಳು. ಕಾರಾಗೃಹದ ಬಾಗಿಲು ಮತ್ತೆ ಮುಚ್ಚಿಕೊಂಡಿತು. ಅಷ್ಟರಲ್ಲಿ ಶಿಶು ಜೋರಾಗಿ ರೋದಿಸತೊಡಗಿತು.



ಕಾವಲುಗಾರರಿಗೆ ಎಚ್ಚರವಾಯಿತು. ಅವರು ಓಡೋಡಿ ಹೋಗಿ ಕಂಸನಿಗೆ ಮಗು ಹುಟ್ಟಿದ ಸುದ್ದಿಯನ್ನು ಮುಟ್ಟಿಸಿದರು. ಕಂಸನು ರೋಷ, ಸಂತೋಷಗಳಿಂದ ಸೆರೆಮನೆಯತ್ತ ಧಾವಿಸಿ ಬಂದನು. ತನ್ನ ಶತ್ರುವನ್ನು ಸಂಹರಿಸುವ ಸಮಯ ಬಂತೆಂದು ತ್ವರೆಯಿಂದ ಬಂದವನೇ ದೇವಕಿಯ ಕೈಯಿಂದ ಮಗುವನ್ನು ಕಸಿದುಕೊಳ್ಳಲು ಮುಂದಾದನು. ಆಗ ದೇವಕಿಯು ದೀನಳಾಗಿ ತನ್ನಣ್ಣನಾದ ಕಂಸನಲ್ಲಿ ಬೇಡಿಕೊಂಡಳು. “ಅಣ್ಣಾ ಇದು ಹೆಣ್ಣು ಮಗು, ನಿನ್ನ ಸೊಸೆ. ಇವಳಿಂದ ನಿನಗೇನೂ ಅಪಾಯವಿಲ್ಲವಲ್ಲ? ಇವಳನ್ನಾದರೂ ಉಳಿಸಿಕೊಡು. ಹಿಂದಿನ ಎಲ್ಲ ಮಕ್ಕಳನ್ನು ಕೊಂದು ನಿನ್ನ ರಕ್ತ ಪಿಪಾಸೆಯನ್ನು ತೀರಿಸಿಕೊಂಡಿದ್ದೀಯಲ್ಲ? ಸ್ತ್ರೀಹತ್ಯೆ ಮಹಾಪಾಪವಲ್ಲವೇ? ಅಣ್ಣಾ, ದಯೆ ತೋರು”. ದೇವಕಿಯ ಬೇಡಿಕೆ, ಗೋಳಾಟಗಳಿಗೆ ಲಕ್ಷ್ಯಕೊಡದೆ ಎಂದಿನಂತೆ ಆ ಹೆಣ್ಣು ಮಗುವನ್ನು ದೇವಕಿಯ ಕೈಯಿಂದ ಸೆಳೆದುಕೊಂಡು ಎತ್ತಿ ಬಂಡೆಗೆ ಬಡಿಯಲು ಅನುವಾದನು. ಆದರೆ ಆ ಮಗು ಅವನ ಕೈಯಿಂದ ಜಾರಿಕೊಂಡು ಛಂಗನೆ ಆಕಾಶಕ್ಕೆ ನೆಗೆಯಿತು. ಅದು ಅಷ್ಟಭುಜೆ ದುರ್ಗೆಯಾಯಿತು. ಆಯುಧಗಳನ್ನು ಹಿಡಿದುಕೊಂಡು ದಿವ್ಯ ಪ್ರಭೆಯನ್ನು ಬೀರುತ್ತ ಅಟ್ಟಹಾಸ ಮಾಡುತ್ತ ದುರ್ಗೆಯೆಂದಳು, “ಎಲೋ ದುಷ್ಟ ಕಂಸ, ನನ್ನನ್ನು ಕೊಲ್ಲುವುದರಿಂದ ನಿನಗೇನು ಲಾಭ? ನಿನ್ನನ್ನು ಸಂಹರಿಸಲಿರುವ ಶತ್ರು ಆಗಲೇ ಹುಟ್ಟಿ ಎಲ್ಲೋ ಬಳೆಯುತ್ತಿದ್ದಾನೆ. ಇನ್ನಾದರೂ ಮಕ್ಕಳನ್ನು ಕೊಲ್ಲುವ ಉದ್ಯೋಗವನ್ನು ಬಿಟ್ಟು ಬಿಡು” ಹೀಗೆಂದು ಆ ಭಗವತಿಯು ಅಂತರ್ಧಾನ ಹೊಂದಿದಳು. ಕಂಸನ ತಾಮಸವೃತ್ತಿ ಇದ್ದಕ್ಕಿದ್ದಂತೆ ಮರೆಯಾಯಿತು. ಅಲ್ಲಿ ಸತ್ತ್ವವೃತ್ತಿ ವಿಜೃಂಭಿಸಿತು. ತನ್ನ ತಂಗಿಯ ಮಕ್ಕಳನ್ನು ಕೊಂದದ್ದಕ್ಕಾಗಿ ಪಶ್ಚಾತ್ತಾಪದಿಂದ ಬೆಂದನು. ವಸುದೇವ-ದೇವಕಿಯರನ್ನು ಸೆರೆಯಿಂದ ಬಿಡುಗಡೆಗೊಳಿಸಿದನು. ಮೇಲಿಂದ ಮೇಲೆ ಅವರಿಂದ ಕ್ಷಮೆಯಾಚಿಸಿದನು. ತನ್ನನ್ನು ವಿಧಿಯೇ ವಂಚಿಸಿದೆಯಾದುದರಿಂದ ತನ್ನ ದುರ್ಗತಿಗೆ ಇತರರನ್ನು ಹೊಣೆಗಾರರನ್ನಾಗಿ ಮಾಡುವುದು ಅಧರ್ಮವೆಂದು ಅಲವತ್ತುಕೊಂಡನು. ಆಗ ವಸುದೇವನೇ ಅವನನ್ನು ಸಂತೈಸಿದನು. “ಜೀವಿಗಳೆಲ್ಲ ಕರ್ಮಾನುಸಾರ ಫಲಗಳನ್ನು ಅನುಭವಿಸಲೇಬೇಕು. ಇದಕ್ಕಾಗಿ ದುಃಖಿಸುವುದು ವ್ಯರ್ಥ”.

ರಾತ್ರಿ ಕಳೆಯುತ್ತಲೆ ಕಂಸನು ತನ್ನ ದುಷ್ಟ ಮಂತ್ರಿಗಳನ್ನು ಕರೆಯಿಸಿ ಅವರಿಗೆ ಹಿಂದಿನ ರಾತ್ರಿ ನಡೆದ ವೃತ್ತಾಂತವನ್ನು ಹೇಳಿದನು. ಆದುರ್ಬುದ್ಧಿಗಳು ದುರ್ಬೋಧೆ ಮಾಡಿದರು. “ಭೋಜಭೂಪತಿಯೇ, ನಿನ್ನ ಶತ್ರು ಎಲ್ಲೋ ಬೆಳೆಯುತ್ತಿದ್ದಾನೆ ಎಂದರೆ ಅವನನ್ನು ಅವಗಣಿಸುವುದು ತಪ್ಪಾದೀತು. ನಾವೀಗಲೇ ಎಲ್ಲೆಲ್ಲಿ ನವಜಾತ ಶಿಶುಗಳಿದ್ದಾವೋ ಅವುಗಳನ್ನು ಕೊಂದುಹಾಕಿ ಬರುತ್ತೇವೆ. ನಿನ್ನ ಶತ್ರುವು ದೂರವೆಲ್ಲಿಯೂ ಇರುವ ಸಂಭವವಿಲ್ಲ, ವಿಷ್ಣುವೇ ನಿನ್ನ ಪ್ರಥಮ ಶತ್ರು. ಅವನಿರುವುದೇ ಸನಾತನ ಧರ್ಮದಲ್ಲಿ. ಸನಾತನ ಧರ್ಮದ ಮೂಲವೇ ವೇದಗಳು, ಗೋವುಗಳು, ತಪಸ್ಸು, ಬ್ರಾಹ್ಮಣರು ಮತ್ತು ಯಜ್ಞಯಾಗಗಳು. ಆದುದರಿಂದ ನಾವು ಇವುಗಳನ್ನೆಲ್ಲ ಧ್ವಂಸಮಾಡಿಬಿಡುತ್ತೇವೆ. ಇದರಿಂದ ವಿಷ್ಣುವನ್ನು ನಿರ್ನಾಮ ಮಾಡಲು ಸುಲಭವಾಗುತ್ತದೆ. ಮಾಯಾವಿಗಳಾದ ನಿನ್ನ ಅನುಚರರನ್ನು ಎಲ್ಲ ದಿಕ್ಕುಗಳಿಗೂ ಕಳಿಸಿಕೊಡು”. ಸ್ವಭಾವತಃ ರಕ್ಕಸನಾದ ಕಂಸನ ಸಾತ್ತ್ವಿಕ ವೃತ್ತಿ ಮಸುಕಾಯಿತು. ತಾಮಸವೃತ್ತಿ ತಾನೇ ತಾನಾಗಿ ಮೆರೆಯಿತು. ಮಂತ್ರಿಗಳ ದುರ್ಬೋಧೆಯಂತೆ ಶಿಶುಗಳನ್ನು, ಗೋಬ್ರಾಹ್ಮಣರನ್ನು ಸದೆಬಡಿಯಲು ರಾಕ್ಷಸರನ್ನು ಕಳಿಸಿಕೊಟ್ಟನು.

### ೨

ಮಥುರೆಗೆ ಹತ್ತಿರದಲ್ಲೇ ಒಂದು ಪುಟ್ಟ ರಾಜ್ಯವಿತ್ತು. ಅದು ವ್ರಜವೆಂದೂ, ಗೋಕುಲವೆಂದೂ ಪ್ರಸಿದ್ಧವಾಗಿತ್ತು. ಅದು ಗೊಲ್ಲರದೇ ರಾಜ್ಯವಾಗಿತ್ತು. ಗೊಲ್ಲರಿಗೂ ಒಬ್ಬ ದೊರೆಯಿದ್ದ. ಅವನ ಹೆಸರು ನಂದ. ನಂದಗೋಪನೆಂದೇ ಜನರು ಅವನನ್ನು ಕರೆಯುತ್ತಿದ್ದರು. ಅವನು ಕಂಸನ ಸಾಮಂತರಾಜ.

ಈ ನಂದನ ಪತ್ನಿಯ ಹೆಸರು ಯಶೋದೆ ಎಂದು. ಈ ದಂಪತಿಗಳು ಹಿಂದನ ಜನ್ಮದಲ್ಲಿ ದ್ರೋಣ ಮತ್ತು ಧರಾದೇವಿಯರಾಗಿದ್ದರಂತೆ. ದ್ರೋಣ ಅಷ್ಟವಸುಗಳಲ್ಲೊಬ್ಬ. ಬ್ರಹ್ಮನ ಆದೇಶದಂತೆ ಅವರು ನಂದ-ಯಶೋದೆಯರಾಗಿ ಹುಟ್ಟಿದ್ದರಂತೆ. ನಂದ ವಸುದೇವನ ಆಪ್ತಮಿತ್ರ. ಆದುದರಿಂದಲೇ ವಸುದೇವನು ತನಗೆ ಮಗನಾಗಿ ಹುಟ್ಟಿದ ಶ್ರೀಹರಿಯನ್ನು ನಂದನ ಮನೆಗೆ ತೆಗೆದುಕೊಂಡು ಹೋದದ್ದು.

ಯಶೋದೆಗೆ ತಾನು ಪ್ರಸವಿಸಿದ್ದು ಹೆಣ್ಣು ಮಗುವೆಂದು ತಿಳಿದಿರಲಿಲ್ಲ. ಅವಳು ನಿದ್ರೆಯಿಂದ ಎಚ್ಚರಗೊಂಡಾಗ ಪಕ್ಕದಲ್ಲಿ ಸುಂದರವಾದ, ದಿವ್ಯವಾದ, ಶ್ಯಾಮಲವರ್ಣದ ಗಂಡುಮಗುವಿರುವುದನ್ನು ಕಂಡು ಪರಮಾನಂದಭರಿತಳಾದಳು. ಮಗುವಿನ ಅಳುವನ್ನು ಕೇಳಿ ನಂದನ ಅರಮನೆಯಲ್ಲಿದ್ದವರೆಲ್ಲ ಸಂಭ್ರಮ, ಸಡಗರದಿಂದ ಸೂತಿಕಾಗೃಹಕ್ಕೆ ಬಂದರು.

(ಮುಂದಿನ ಸಂಚಿಕೆಯಲ್ಲಿ ಮುಂದುವರಿಯುವುದು)

## ಹೊಸ ಬೆಳಕು

**ನಲ್ನುಡಿ :**

**ಮಾಕುರು ಧನಜನಯೌವನ ಗರ್ವಂ**
**ಹರತಿ ನಿಮೇಷಾತ್ ಕಾಲಃ ಸರ್ವಮ್**
**ಮಾಯಾಮಯಮಿದಮಖಿಲಂ ಬುದ್ಧ್ವಾ**
**ಬ್ರಹ್ಮಪದಂ ತ್ವಂ ಪ್ರವಿಶವಿದಿತ್ವಾ ॥**

ಅಂದರೆ ಧನ ಜನ ಯೌವನ ಗರ್ವವ ಬಿಡು. ಅವು ನಿಮಿಷದಿ ಕಾಲನ ವಶವಾಗುವುವು. ಮಾಯಾಮಯವೀ ಜಗವೆಂದರಿತು ಬ್ರಹ್ಮಪದತ್ವಕ್ಕೆ ನೀನೊಳಗಾಗು.

**ಪುಸಕ ಪರಿಚಯ :**

ತಪ್ತ (ಕತೆಗಳು)
ಲೇಖಕರು : ಎಂ. ವ್ಯಾಸ

‘ತಪ್ತ’ವನ್ನು ಪ್ರಕಟಿಸಲು ನೆರವಿತ್ತ ಡಾ। ವರದರಾಜ ಚಂದ್ರಗಿರಿಯವರು ಈ ಪುಸ್ತಕದಲ್ಲಿ ‘ಎರಡು ಮಾತು’ ಹೇಳಿರುವುದನ್ನು ಇಲ್ಲಿ ಮನನ ಮಾಡೋಣ-“ವಿಕ್ಷಿಪ್ತ ಕತೆಗಾರ ಎಂದೇ ಗುರುತಿಸಿಕೊಂಡಿದ್ದ ಕಾಸರಗೋಡಿನ ಎಂ.ವ್ಯಾಸರ ಕತೆಗಳು ಸಾಹಿತ್ಯ ವಲಯದಲ್ಲಿ ತನ್ನದೇ ಆದ ವಿಶೇಷ ಗುಣಗಳಿಂದ ವಿಶಿಷ್ಟವಾದ ಸ್ಥಾನವನ್ನು ಪಡೆದಿವೆ. ಅವರ ಕತೆಗಳು ನಮ್ಮಲ್ಲಿ ಹೆಚ್ಚು ಚರ್ಚಿತವಾಗಿಲ್ಲ ಎನ್ನುವುದು ನಿಜ. ಆದರೆ ಒಂದು ದೊಡ್ಡ ಓದುಗ ವಲಯವನ್ನು ಅದು ತಟ್ಟುತ್ತಿತ್ತು. ಅವುಗಳಿಗೆ ಓದುಗರ ಭಾವಪ್ರಪಂಚದಲ್ಲಿ ಸ್ಪಂದನವನ್ನುಂಟು ಮಾಡುವ ಗುಣವಿತ್ತು. ಪ್ರಸಿದ್ಧಿ, ಪ್ರಶಸ್ತಿಗಳಿಂದ ದೂರ ಉಳಿದ ವ್ಯಾಸರು ಓದುಗರ ಹೃದಯಕ್ಕೆ ಹೆಚ್ಚು ಹತ್ತಿರವಾಗಿದ್ದರು.

ವ್ಯಾಸರ ಕತೆಗಳು ಸಾಯಬಾರದು. ಅವರ ಕತೆಗಳ ಆಶಯದ ಆಳದಲ್ಲಿರುವುದು ಬದುಕಿನ ಶೋಧನೆಯೇ. ವ್ಯಾಸರು ಈ ವರೆಗೆ ಬರೆದಿರುವ ಎಲ್ಲ ಬರಹಗಳನ್ನು ಸಂರಕ್ಷಿಸಿ, ಸಾಹಿತ್ಯ ಲೋಕಕ್ಕೆ ಸಮರ್ಪಿಸಬೇಕು ಎಂದು ವ್ಯಾಸರ ಪತ್ನಿ ಶ್ರೀಮತಿ ಶಶಿಕಲಾ, ಮಕ್ಕಳಾದ ತೇಜಸ್ವಿ, ಕೃಪಾ, ಪ್ರತಿಮಾ ಮತ್ತು ಸಮೀಪದ ಬಂಧುಗಳಾದ ನಾವೆಲ್ಲರೂ ನಿರ್ಧರಿಸಿದ್ದೇವೆ. ಈಗಾಗಲೇ ಮೂರು ನಾಲ್ಕು ಮಂದಿ ಪ್ರಕಾಶಕರು ‘ನಮಗೊಂದಷ್ಟು ವ್ಯಾಸರ ಕತೆಗಳನ್ನು ಕೊಡಿ, ನಾವು ಪ್ರಕಟಿಸುತ್ತೇವೆ’ ಎಂದು ವಿನಂತಿಸಿಕೊಂಡಿದ್ದಾರೆ. ಇದೀಗ ಪುತ್ತೂರು ಕರ್ನಾಟಕ ಸಂಘದ ಸಂಕಲನ ‘ತಪ್ತ’ ಹೊರಬರುತ್ತಿದೆ. ಈ ಯೋಜನೆಯನ್ನು ಕೈಗೆತ್ತಿಕೊಂಡ ಸಂಘದ ಅಧ್ಯಕ್ಷರಾದ ಶ್ರೀ ಬಿ. ಪುರಂದರ ಭಟ್ಟರು ನಮ್ಮೆಲ್ಲರ ಅಭಿಮಾನಕ್ಕೆ ಪಾತ್ರರಾಗಿದ್ದಾರೆ. ಅವರಿಗೆ ನಮ್ಮ ಪ್ರೀತಿಯ ಕೃತಜ್ಞತೆಗಳು ಸಲ್ಲುತ್ತದೆ. ಸಹೃದಯಿ ಓದುಗರ ಅಭಿಪ್ರಾಯಗಳಿಗೆ ಸದಾ ಸ್ವಾಗತವಿದೆ”

‘ತಪ್ತ’ವನ್ನು ಪ್ರಕಾಶಿಸುವ ನಿಮಿತ್ತ ಬಿ. ಪುರಂದರಭಟ್ ಹೀಗೆ ಹೇಳುತ್ತಾರೆ – “ಅರಸುವ ದಣಿವಿರದ ಜಿಜ್ಞಾಸು ಪಾಂಥ ಎಂ.ವ್ಯಾಸ. ವ್ಯಾಸರ ಕಥೆಗಳಲ್ಲಿ ವ್ಯಾಸರಿದ್ದಾರೆ. ವೇದವ್ಯಾಸರೂ ಇದ್ದಾರೆ. ವ್ಯಾಸದೃಷ್ಟಿಗೆ ಗೋಚರಿಸಿದ ಎಲ್ಲರೂ ಇದ್ದಾರೆ. ಬದುಕಲೊಲ್ಲದವರು, ಬದುಕಿಯೂ ಬದುಕದವರು ಹೀಗೆ ನಮ್ಮ ಪಾಲಿಗೆ ದೈಹಿಕ ವ್ಯಾಸಾಂತ್ಯ ಅಕಾಲಿಕ, ಈ ಸಂಕಲನ ವ್ಯಾಸರ ನೆನಪಿಗೆ ಮುಡಿಪು.

ಮುನ್ನುಡಿಗಾರ ಲಕ್ಷ್ಮೀಶ ತೋಳ್ಪಾಡಿ ಇವರ ಕೆಲವು ಟಿಪ್ಪಣಿಗಳು: “ಎಂ.ವ್ಯಾಸ ನನ್ನ ಆಯ್ಕೆಯ ಕತೆಗಾರರಲ್ಲಿ ಓರ್ವರು. ಸಂಗೀತಗಾರರ ವಿಶಿಷ್ಟ, ವೈಯಕ್ತಿಕ ‘ಶ್ರುತಿ’ಯಂತೆ ವ್ಯಾಸರ ಕತೆಗಳ ‘ಶ್ರುತಿ’ ಕೂಡಾ. ಅದನ್ನು ಬದಲಾಯಿಸುವುದು ಅಸಾಧ್ಯ. ಬೇರೆ ‘ಶ್ರುತಿ’ಯಲ್ಲಿ ಅವರು ಹಾಡಲಾರರು. ಅದು ಅಷ್ಟು ವೈಯಕ್ತಿಕ. ಆ ‘ಶ್ರುತಿ’ಯನ್ನು ಏನೆಂದು ಬಣ್ಣಿಸುವುದು?”

ಪ್ರಕಾಶನ : ಕರ್ನಾಟಕ ಸಂಘ. ‘ಅನುರಾಗ’, ಶ್ರೀ ರಾಧಾಕೃಷ್ಣ ಮಂದಿರ ರಸ್ತೆ, ಪುತ್ತೂರು – 574 201.

ಮುದ್ರಣ : ರಾಜೇಶ್ ಪವರ್‌ಪ್ರೆಸ್, ದರ್ಬೆ, ಪುತ್ತೂರು. ಬೆಲೆ : ರೂ.145/-

– ವೈ. ಮೋಹನ ರಾವ್.

**ಶ್ರೀಶಾರದಾ ವೇದಿಕೆಯ ಮಹಾ ಪೋಷಕರು :** ಅಂಬಲಪಾಡಿ ಕೃಷ್ಣ ರಾವ್, ಡಾ। ಪಿ. ವಿಠ್ಠಲ ರಾವ್ ಮಣಿಪಾಲ, ಕೆ. ರಮೇಶ ಶ್ಯಾನುಭಾಗ್ ಸತಾರ, ಟಿ. ಆರ್. ಶ್ಯಾನುಭಾಗ್ ಬೆಂಗಳೂರು, ನಳಿನಿ ಆರ್. ಶ್ಯಾನುಭಾಗ್ ಬೆಂಗಳೂರು, ದಿ। ಕುಂಜಾರು ವಿಠ್ಠಲ ರಾವ್ ಮುಂಬೈ, ಶ್ಯಾಮರಾವ್ ಆಲೆವೂರು, ವೈ. ಮುರಳೀಕೃಷ್ಣರಾವ್ ಉಡುಪಿ, ಸಿ. ಸರ್ವೋತ್ತಮ ರಾವ್ ಚಿಟ್ಪಾಡಿ, ಎಂ. ಸದಾನಂದ ರಾವ್ ಚಿಟ್ಪಾಡಿ, ಡಾ। ವೈ. ಚಂದ್ರಶೇಖರ ರಾವ್ ಕುಕ್ಕಿಕಟ್ಟೆ, ಬಿ. ಎಂ.ಸಂಜೀವ ರಾವ್ ಮಂಗಳೂರು, ಎನ್.ಡಿ. ಜಗನ್ನಾಥ ರಾವ್ ಬೆಂಗಳೂರು, ಕೆ. ಬಿ. ರವಿಶಂಕರ್‌ರಾವ್ ಮಂಗಳೂರು, ಪಿ. ಆರ್. ಸದಾಶಿವ ರಾವ್ ಬೆಂಗಳೂರು, ಬೆಳ್ಮಣ್ ವಾಸುದೇವ ರಾವ್ ಉಡುಪಿ, ಕುಡುಪು ನಾರಾಯಣ ರಾವ್ ಸತಾರ, ಎ. ಕೃಷ್ಣಮೂರ್ತಿ ರಾವ್ ಆಳುಗ್ಗೇಲು, ಶ್ರೀಮತಿ ಸರೋಜಿನಿ ದೇವರಾವ್ ನಂದಿಕೂರು, ಡಾ। ಪರೀಕ ಗೋಪಾಲಕೃಷ್ಣರಾವ್ ಮಾರ್ಪಳ್ಳಿ ಉಡುಪಿ, ಕೆ. ಭಾಸ್ಕರರಾವ್ ಉಡುಪಿ, ಕೆ. ವೇಣುಗೋಪಾಲರಾವ್ ಅಂಬಲ್ಪಾಡಿ, ಬಿ. ಕೃಷ್ಣಮೂರ್ತಿರಾವ್ ಅಂಬಲ್ಪಾಡಿ.

# ಬೈಕಾಡಿಯ ಡಾ। ಅನಿಲ್‌ಕುಮಾರ್ ದಂಪತಿಗಳಿಗೆ ಸನ್ಮಾನ



ಬೈಕಾಡಿ ಯುವಕ ಮಂಡಲದ 35ನೇ ವಾರ್ಷಿಕೋತ್ಸವ ಮತ್ತು ಸನ್ಮಾನ ಸಮಾರಂಭವು ಇತ್ತೀಚೆಗೆ ಬೈಕಾಡಿಯಲ್ಲಿ ಜರಗಿತು. ಇದೇ ಸಂದರ್ಭದಲ್ಲಿ ಸ್ಥಳೀಯ ವೈದ್ಯ ಡಾ। ಅನಿಲ್‌ಕುಮಾರ್ ದಂಪತಿಗಳನ್ನು ಜಿಲ್ಲಾ ಯುವಜನ ಸೇವಾ ಹಾಗೂ ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕ ಸಿ.ಬಿ.ರಂಗಯ್ಯ ಸನ್ಮಾನಿಸಿದರು. ''ನಮ್ಮ ಕುಟುಂಬದ ಪೂರ್ವಿಕರು ಬಡ ಮಕ್ಕಳಿಗೆ ವಿದ್ಯೆ ನೀಡುವ ಐಗಳ ಮಠ ಮತ್ತು ಉಚಿತ ಆಯುರ್ವೇದ ವೈದ್ಯ ಪದ್ಧತಿಯಂತೆ ನಡೆಸಿಕೊಂಡು ಬಂದಿದ್ದು ನಮ್ಮ ಅಜ್ಜ ಕೀರ್ತಿಶೇಷ ಬೈಕಾಡಿ ಭೋಜರಾಯರು ವೈದ್ಯರೇ ಆಗಿದ್ದು ಅದೇ ಪರಂಪರೆಯನ್ನು ನಮ್ಮ ತಂದೆಯವರು ಕೂಡಾ ಮುಂದುವರೆಸಿಕೊಂಡು ಬಂದು ನನ್ನನ್ನು ಎಮ್.ಬಿ.ಬಿ.ಎಸ್. ಕಲಿತು ವೈದ್ಯನಾಗುವಂತೆ ಹುರಿದುಂಬಿಸಿದರಲ್ಲದೇ ತನ್ನ ಸೊಸೆಯೂ ವೈದ್ಯೆ ಆಗಿದ್ದಲ್ಲಿ ಇಲ್ಲಿನ ಹಳ್ಳಿಯ ಮಹಿಳೆಯವರಿಗೆ ಅನುಕೂಲವಾದೀತು ಎಂದು ಭಾವಿಸಿದ್ದವರು. ಅವರ ನಿರೀಕ್ಷೆ ತಪ್ಪಾಗದೇ ನನಗೆ ದೇವರ ದಯೆಯಿಂದ ವೈದ್ಯ ಪತ್ನಿಯೇ ಒದಗಿ ಬಂದಳು. ಹಾಗಾಗಿ ಗ್ರಾಮೀಣ ಸೇವೆಯಲ್ಲಿ ತಂದೆಯವರ ಪ್ರೇರಣೆ ಮತ್ತು ದೇವರ ದಯೆಯೇ ಕಾರಣವಾದುದರಿಂದ, ತಾವುಗಳು ನನ್ನ ಮೇಲಿನ ಅಭಿಮಾನದಿಂದ ನೀಡಿದ ಈ ಸನ್ಮಾನವನ್ನು ಬೈಕಾಡಿ ಶ್ರೀ ಕಾಮೇಶ್ವರ ದೇವರ ಪದತಲದಲ್ಲಿಟ್ಟು, ನನ್ನ ಪೂಜ್ಯರಾದ ಮಾತಾ-ಪಿತೃಗಳಿಗೆ ಅರ್ಪಿಸುತ್ತಿದ್ದೇನೆ'' ಎಂದು ಸನ್ಮಾನಕ್ಕೆ ಉತ್ತರಿಸುತ್ತಾ ಡಾ। ಅನಿಲ್‌ಕುಮಾರ್‌ರವರು ನುಡಿದರು. ಇವರು ಬೈಕಾಡಿಯ ಡಾ। ಸೂರ್ಯನಾರಾಯಣರಾವ್ ಮತ್ತು ಶ್ರೀಮತಿ ಶೋಭಾ ಎಸ್.ರಾವ್ ಇವರ ಸುಪುತ್ರ.

# ಕೋಟೆಕಾರು ಶೃಂಗೇರಿ ಮಠದಲ್ಲಿ ಶಂಕರ ಜಯಂತ್ಯುತ್ಸವ

ಮಂಗಳೂರು ಕೋಟೆಕಾರು ಶ್ರೀ ಶೃಂಗೇರಿ ಶಂಕರ ಮಠದಲ್ಲಿ ತಾ.27-4-2009ರಿಂದ ತಾ.29-4-2009ರ ವರೆಗೆ ಶ್ರೀ ಶಂಕರ ಜಯಂತ್ಯುತ್ಸವವು ಧರ್ಮಾಧಿಕಾರಿ ಶ್ರೀ ಸತ್ಯಶಂಕರ ಬೊಳ್ಳಾವರ ಇವರ ನೇತೃತ್ವದಲ್ಲಿ ನೆರವೇರಿತು.

ತಾ.22ರಂದು ಸಂಜೆ ಶ್ರೀ ಶಂಕರ ದಾಮ್ಲೆ ಮಂಗಳೂರು ಇವರಿಂದ ಉದ್ಘಾಟಿಸಲ್ಪಟ್ಟ ಈ ಉತ್ಸವದಲ್ಲಿ ಪ್ರತಿದಿನ ಪೂರ್ವಾಹ್ನ ರುದ್ರಾಭಿಷೇಕ, ಮಹಾಪೂಜೆ, ಶ್ರೀ ರುದ್ರ ಹೋಮ ಹಾಗೂ ರಾತ್ರಿ ಆಚಾರ್ಯ ಪೂಜೆ ಮೊದಲಾದ ಧಾರ್ಮಿಕ ಕಾರ್ಯಕ್ರಮಗಳೂ, ಹಾಗೆಯೇ ಶ್ರೀ ಕೂರಾಡಿ ಸದಾಶಿವ ಕಲ್ಲೂರ, ಬಾರ್ಕೂರು ಶ್ರೀ ಹಿರಣ್ಯ ವೆಂಕಟೇಶ ಭಟ್ ಬಾಯಾರು, ಡಾ। ಮೇಘಶ್ಯಾಮರಾವ್ ಮಂಗಳೂರು ಮೊದಲಾದ ವಿದ್ವಾಂಸರಿಂದ ಧಾರ್ಮಿಕ ಉಪನ್ಯಾಸವೂ ನೆರವೇರಿತು.

ಸಾಂಸ್ಕೃತಿಕ ಕಾರ್ಯಕ್ರಮವಾಗಿ ಕರ್ನಾಟಕ ಸಂಗೀತ ಕಛೇರಿ ಮತ್ತು ತಾ.29ರಂದು ರಾತ್ರಿ ವಸಂತೋತ್ಸವವೂ ಸಂಪನ್ನಗೊಂಡಿತು.

# 'ಉಷಾರಾಗ ದೀಪಿಕಾ' ಸಿ.ಡಿ. ಬಿಡುಗಡೆ



ಚಿಕಾಗೊ: ಇಲ್ಲಿನ ವಿದ್ಯಾರಣ್ಯ ಕನ್ನಡ ಕೂಟದ ಆಶ್ರಯದಲ್ಲಿ ಇತ್ತೀಚೆಗೆ ಕವಿ ಡಾ। ನಾಗಭೂಷಣ ಮೂಲ್ಕಿ ಅವರ 'ಉಷಾರಾಗ ದೀಪಿಕಾ' ಸಂಗೀತ ಸಿ.ಡಿ.ಯನ್ನು ಬಿಡುಗಡೆ ಮಾಡಲಾಯಿತು.

ಈ ಸಿ.ಡಿ.ಯನ್ನು ಮೂಲ್ಕಿ ಹಾಗೂ ಡಾ। ಉಷಾ ಕೊಲ್ಪೆ ಅವರ ನಿರ್ದೇಶನದಲ್ಲಿ ತಯಾರು ಮಾಡಲಾಗಿದೆ.

'ನನ್ನ ಪ್ರೀತಿಯ ಹುಡುಗಿ', 'ಪ್ರೀತಿ, ಪ್ರೇಮ, ಪ್ರಣಯ' ಸೇರಿದಂತೆ ಕನ್ನಡದ ಜನಪ್ರಿಯ ಚಿತ್ರಗಳಲ್ಲಿ ಹಾಡಿರುವ ಕರ್ನಾಟಕದ ಪ್ರಸಿದ್ಧ ಸಾಫ್ಟ್‌ವೇರ್ ಎಂಜಿನಿಯರ್ ರಾಮ್ ಪ್ರಸಾದ್ ಹಾಡುಗಳು ಈ ಸಿ.ಡಿ.ಯಲ್ಲಿವೆ.

ಸಿ.ಡಿ. ಬಿಡುಗಡೆ ಜೊತೆಗೆ ಯುಗಾದಿ ಹಬ್ಬವನ್ನು ಕೂಡ ಸಂಭ್ರಮದಿಂದ ಆಚರಿಸಲಾಯಿತು. ಈ ಕಾರ್ಯಕ್ರಮಕ್ಕೆ ಸುಮಾರು 650 ಕನ್ನಡಿಗರು ಸಾಕ್ಷಿಯಾದರು.

ಕೃಪೆ : ಅಂತರ್ಜಾಲ

# ಶ್ರೀ ಎಂ.ಆರ್. ವಾಸುದೇವ ಇವರಿಗೆ ಸನ್ಮಾನ

ತಾ.05-04-2009ನೇ ಆದಿತ್ಯವಾರ ಶ್ರೀಸುಬ್ರಹ್ಮಣ್ಯ ಸಭಾ, ಮಂಗಳೂರು ಇಲ್ಲಿ ವಿಪ್ರ ಸಮಾಗಮ ವೇದಿಕೆ ಇವರ ಸಹಯೋಗ ದಲ್ಲಿ ಶ್ರೀ ಎಂ.ಆರ್. ವಾಸುದೇವ್‌ರವರಿಗೆ ಸನ್ಮಾನ ಹಾಗೂ ಬೀಳ್ಕೊಡುಗೆ ಸಮಾರಂಭ ಜರಗಿತು. ವಿಪ್ರ ಸಮಾಗಮ ವೇದಿಕೆಯ ಅಧ್ಯಕ್ಷ ಶ್ರೀ ಗುರುರಾಜ್ ನೆರೆದ ಅಭಿಮಾನಿಗಳನ್ನು ಆದರದಿಂದ ಸ್ವಾಗತಿಸಿದರು.

ಶ್ರೀ ಎಂ.ಆರ್.ವಾಸುದೇವ್‌ರವರ ಅಭಿನಂದನೆಯನ್ನು ಶ್ರೀ (ಡಾ) ಸಿ.ಆರ್. ಬಲ್ಲಾಳ್ ನೆರವೇರಿಸಿದರು. ಸಾಮೂಹಿಕ ಶ್ರೀ ಸತ್ಯನಾರಾಯಣ ಪೂಜೆಯೂ ಜರಗು ತ್ತಿರುವ ಈ ಸಂದರ್ಭದಲ್ಲಿ ಈ ದೇವರ ಸನ್ನಿಧಿ ಯಲ್ಲಿ, ಶ್ರೀ ಎಂ.ಆರ್. ವಾಸುದೇವರನ್ನು ಸನ್ಮಾನಿಸುತ್ತಿರುವುದು ಅತ್ಯಂತ ಸಂತೋಷದ ವಿಷಯ. ಅದೂ ಎಲ್ಲಾ ಬ್ರಾಹ್ಮಣರು ಸೇರಿ ಸನ್ಮಾನಿಸುತ್ತಿರುವುದು ಇನ್ನೂ ಆನಂದದ ವಿಷಯ. ಸರಕಾರಿ ಸೇವೆಯಲ್ಲಿದ್ದು ಇಷ್ಟು ಎತ್ತರಕ್ಕೇರಿದ ಶ್ರೀಯುತರು 'Director of Aviation' ಆಗಲಿ ಎಂದು ಹಾರೈಸಿದರು.

ಶ್ರೀಮತಿ ಕಾತ್ಯಾಯನಿ ಸೀತಾರಾಂ ಅಭಿನಂದನಾ ಪತ್ರವನ್ನು ವಾಚಿಸಿದರು. ವಿಪ್ರ ಸಮಾಗಮ ವೇದಿಕೆಯ ವತಿಯಿಂದ ಶ್ರೀ ಎಂ. ಆರ್. ವಾಸುದೇವ ದಂಪತಿಗಳನ್ನು ಸನ್ಮಾನಿಸ ಲಾಯಿತು. ವಿವಿಧ ಸಂಘಟನೆಗಳ ಪ್ರತಿನಿಧಿ ಗಳು ಹಾರಾರ್ಪಣೆಯನ್ನು ಮಾಡಿದರು. ಶ್ರೀ ಸುಬ್ರಹ್ಮಣ್ಯ ಸಭೆಯ ವತಿಯಿಂದ ಅವರನ್ನು ವಿಶೇಷವಾಗಿ ಸನ್ಮಾನಿಸಲಾಯಿತು.

ಮುಖ್ಯ ಅತಿಥಿಯಾಗಿ ಆಗಮಿಸಿದ್ದ ಶ್ರೀಯುತ ಪ್ರದೀಪ್ ಕುಮಾರ್ ಕಲ್ಕೂರ ಈ ರೀತಿ ಪ್ರತಿಕ್ರಿಯಿಸಿದರು. ''ಶ್ರೀ ಎಂ.ಆರ್. ವಾಸುದೇವರವರು ಸಾಧಕ ವಿಪ್ರರ ಪ್ರತಿರೂಪ ವಾಗಿದ್ದಾರೆ. ಯಾವ ರೀತಿ ಶ್ರೀನಿವಾಸ ಮಲ್ಯರಂತಹ ಮುತ್ಸದ್ದಿಗಳು ಜಿಲ್ಲೆಯ ಜನರ ಮನಸ್ಸಿನಲ್ಲಿ ಸ್ಥಾನವನ್ನು ಪಡೆದಿದ್ದಾರೋ ಹಾಗೆಯೇ ಶ್ರೀ ಎಂ.ಆರ್.ವಾಸುದೇವರೂ ಕೂಡಾ ಸದಾ ಸ್ಮರಣೀಯರಾಗಿದ್ದಾರೆ. ಎಷ್ಟೋ ವರ್ಷಗಳ ಇತಿಹಾಸವಿರುವ ಮಂಗಳೂರು ವಿಮಾನ ನಿಲ್ದಾಣ ಒಬ್ಬ ವಿಪ್ರನ ನಾಯಕತ್ವದಲ್ಲಿ ಇಷ್ಟು ಎತ್ತರಕ್ಕೇರಿರುವುದು ನಮ್ಮೆಲ್ಲರಿಗೆ ಹೆಮ್ಮೆಯ ವಿಷಯ. ಸರಕಾರಿ ಉದ್ಯೋಗದಲ್ಲಿ ಪದೋನ್ನತಿ, ವರ್ಗಾವಣೆ ಅನಿವಾರ್ಯ. ಹಾಗಾಗಿ ಶ್ರೀಯುತರು ಕೊಯಮುತ್ತೂರಿಗೆ ತೆರಳುವ ಈ ಸಂದರ್ಭದಲ್ಲಿ ಅವರಿಗೆ ನಾವೆಲ್ಲಾ ಶುಭವನ್ನು ಹಾರೈಸುವ ಎಂದರು. ಸನ್ಮಾನಕ್ಕೆ ಉತ್ತರಿಸಿದ ಶ್ರೀ ಎಂ. ಆರ್.ವಾಸುದೇವ್, ಮಂಗಳೂರು ವಿಮಾನ ನಿಲ್ದಾಣದಲ್ಲಿ ಆಗಿರತಕ್ಕಂತಹ ಕಾರ್ಯಗಳು ತನ್ನೊಬ್ಬನಿಂದ ಆದದ್ದಲ್ಲ, ನನ್ನ ಸಹೋದ್ಯೋಗಿಗಳ ಶ್ರಮವೂ ಇದೆ. ಹಾಗೆಯೇ ಪರಮಾತ್ಮನ ಅನುಗ್ರಹವೂ ನನ್ನ ಮೇಲೆ ಇದ್ದದ್ದು, ಎಲ್ಲಾ ಬ್ರಾಹ್ಮಣರ ಆಶೀರ್ವಾದ ದೊರೆತದ್ದು ಇಷ್ಟಕ್ಕೆಲ್ಲಾ ಕಾರಣ ಎಂದರು. ಸುಬ್ರಹ್ಮಣ್ಯ ಸಭೆಗೂ ನಾನು ಚಿರಋಣಿ. ಶತಮಾನೋತ್ಸವ ಸಮಿತಿಯ ಅಧ್ಯಕ್ಷನಾಗಿ ಸೇವೆ ಸಲ್ಲಿಸುವುದಕ್ಕೆ ಅವಕಾಶ ಸಿಕ್ಕಿದ್ದು ನನ್ನ ಭಾಗ್ಯ. ಕೊಯಮುತ್ತೂರಿಗೆ ಯಾರಾದರೂ ಬಂದಲ್ಲಿ ತನ್ನನ್ನು ಸಂಪರ್ಕಿಸು ವಂತೆ ವಿನಂತಿಸಿದರು.

ಕಾರ್ಯಕ್ರಮದ ಅಧ್ಯಕ್ಷರಾದ ಶ್ರೀ ಜಗನ್ನಿವಾಸ್‌ರಾಯರು ಸಂಘಟನೆ, ನಾಯಕತ್ವ, ಮೌಲ್ಯಗಳು ಇವು ಸಾಧಕನ ಸಾಧನೆಗೆ ಅಡಿಗಲ್ಲುಗಳು. ಈ ಮೂರೂ ಗುಣಗಳನ್ನು ಶ್ರೀ ಎಂ. ಆರ್. ವಾಸುದೇವ್ ಹೊಂದಿರು ವುದೇ ಅವರು ಈ ಎತ್ತರಕ್ಕೆ ಏರಲು ಸಹಕಾರಿಗಳಾಗಿವೆ. ಮಾನವನು ಹುಟ್ಟುವಾಗ ಮೂರು ಋಣ ಗಳನ್ನು ತೀರಿಸುವ ಅನಿವಾರ್ಯತೆಯನ್ನು ಹೊಂದಿರುತ್ತಾನೆ. ದೇವಋಣ, ಪಿತೃಋಣ, ಋಷಿಋಣ. ಇದರ ಜತೆ ನಾಲ್ಕನೆಯ ಋಣವನ್ನು ಸೇರಿಸ ಬೇಕಾಗುತ್ತದೆ. ಅದೇ ಸಮಾಜ ಋಣ. ಸಮಾಜಕ್ಕೆ ನಾವು ಏನು ನೀಡಿದ್ದೇವೆ ಎಂಬುದನ್ನು ಸದಾ ಮನಸ್ಸಿನಲ್ಲಿರಿಸಿ ಕೊಳ್ಳಬೇಕು. ಶ್ರೀ ಎಂ.ಆರ್. ವಾಸುದೇವ್ ರವರು ತಮ್ಮ ಕರ್ತವ್ಯಗಳ ಮೂಲಕ ಸಮಾಜ ಋಣವನ್ನು ತೀರಿಸಿದ್ದಾರೆ. ಮುಂದೆಯೂ ಸಾಮಾಜಿಕವಾಗಿ ಇನ್ನಷ್ಟು ಔನ್ನತ್ಯವನ್ನು ಸಾಧಿ ಸಲಿ ಎಂದು ಹಾರೈಸಿದರು.

ಶ್ರೀ ಕರುಣ್‌ರಾವ್ ಬೆಳ್ಳೆಯವರು ಶ್ರೀ ಎಂ.ಆರ್.ವಾಸುದೇವರ ಸಹಕಾರವನ್ನು ಮುಕ್ತ ಕಂಠದಿಂದ ಸ್ಮರಿಸುತ್ತಾ ಶ್ರೀ ಸಭೆಯ ಮುಂದಿನ ಯೋಜನೆಗಳಿಗೂ ಅದೇ ರೀತಿಯ ಸಹಕಾರವನ್ನು ಆಶಿಸುತ್ತಾ, ಬಂದ ಅಭ್ಯಾಗತರಿಗೆ ಧನ್ಯವಾದಗಳನ್ನು ನೀಡಿದರು. ಶ್ರೀ ನಾಗರಾಜ ರಾವ್ ವರ್ಕಾಡಿ ಕಾರ್ಯಕ್ರಮವನ್ನು ನಿರೂಪಿಸಿದರು.

ಶ್ರೀ ಸತ್ಯನಾರಾಯಣ ಪೂಜಾ ಪ್ರಸಾದ ಹಾಗೂ ಪ್ರಸಾದ ಭೋಜನದೊಂದಿಗೆ ಕಾರ್ಯಕ್ರಮ ಕೊನೆಗೊಂಡಿತು.

ವರದಿ : **ಪ.ಸಂಜಯಕುಮಾರ್‌ರಾವ್**

## ನೇಮೋತ್ಸವ

ಉಡುಪಿ-ಚಿಟ್ಪಾಡಿ ಶ್ರೀ ಕೆ. ಭುಜಂಗರಾವ್ ಮತ್ತು ಕುಟುಂಬಿಕರು ಶ್ರೀ ಪಂಜುರ್ಲಿ ಮತ್ತು ಬೈಕಾಡ್ತಿ ದೈವಗಳ ನೇಮೋತ್ಸವವನ್ನು ತಾ.2-5-2009ರಂದು ಬಂಧುಬಾಂಧವರೊಡಗೂಡಿ ನೆರವೇರಿಸಿದರು.


## ಬ್ರಹ್ಮರಥೋತ್ಸವ

ಉಡುಪಿ-ಚಿಟ್ಪಾಡಿ ಶ್ರೀ ಕೆ. ಭುಜಂಗರಾವ್‌ರವರು ಉಡುಪಿಯ ಶ್ರೀಕೃಷ್ಣ-ಮುಖ್ಯಪ್ರಾಣ ದೇವರ ಸನ್ನಿಧಾನದಲ್ಲಿ ಬ್ರಹ್ಮರಥೋತ್ಸವ ಸೇವೆಯನ್ನು ತಾ.4-5-2009ರಂದು ತಮ್ಮ ಬಂಧುಬಳಗದವರೊಂದಿಗೆ ಸೇರಿ ವಿಜೃಂಭಣೆಯಿಂದ ಜರಗಿಸಿದರು.

## ಶ್ರೀಮಹಾಗಣಪತಿ ದೇವರ ಪ್ರತಿಷ್ಠೆ

ತಾ.20-5-2009ನೇ ಬುಧವಾರ ಹಾಲಾಡಿ ಮುದೂರಿ ಶ್ರೀ ಮಹಾಲಿಂಗೇಶ್ವರ ದೇವಸ್ಥಾನದ ಪ್ರಾಕಾರದಲ್ಲಿ ದಿ। ಶ್ರೀಮತಿ ಸಾವಿತ್ರಿ ಅಮ್ಮ ಮತ್ತು ದಿ। ಶ್ರೀ ಯಜ್ಞನಾರಾಯಣ ಹೆಬ್ಬಾರರ ಸ್ಮರಣಾರ್ಥವಾಗಿ ಮಕ್ಕಳು, ಮೊಮ್ಮಕ್ಕಳು ಹಾಗೂ ಕುಟುಂಬದವರಿಂದ ಶ್ರೀ ಮಹಾಗಣಪತಿ ದೇವರ ಪ್ರತಿಷ್ಠೆ ನೆರವೇರಲಿದ್ದು, ಈ ಕಾರ್ಯಕ್ರಮಕ್ಕೆ ಎಲ್ಲಾ ಬಂಧುಬಾಂಧವರ ಆಗಮನವನ್ನು ಶ್ರೀಮತಿ ಮತ್ತು ಶ್ರೀ ಎಂ. ಬಾಬುರಾವ್, 'ಶ್ರೀಸತ್ಯಸಾಯಿನಿಲಯ', ಮುದೂರಿ, ಹಾಲಾಡಿ ಇವರು ಬಯಸಿರುತ್ತಾರೆ

# ''ಅಗ್ರಜನ್ಮ''-ಬ್ರಾಹ್ಮಣ



– ಮ.ನಾ.ಹೆಬ್ಬಾರ, ಎಂ.ಎ., ಬಿ.ಎಡ್.

**ಶ್ರೀ ಮ.ನಾ.ಹೆಬ್ಬಾರ್, ಎಂ.ಎ., ಬಿ.ಎಡ್, ನಿವೃತ್ತ ಉಪನ್ಯಾಸಕರು, ಹರಿದಾಸರು ಹಾಗೂ ಸಾಹಿತಿಗಳಾದ ಇವರು ಉಡುಪಿಯಲ್ಲಿ ಸಂಪನ್ನಗೊಂಡ ಪ್ರಥಮ ಸ್ಥಾನಿಕ ಬ್ರಾಹ್ಮಣ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಕವಿಗೋಷ್ಠಿಯ ಅಧ್ಯಕ್ಷತೆಯನ್ನು ವಹಿಸಿದ್ದರು. ಇವರು ಶ್ರೀಶಾರದಾ ಪತ್ರಿಕೆಗೆ ನಿರಂತರವಾಗಿ ಲೇಖನಗಳನ್ನು ಒದಗಿಸಿ ಪತ್ರಿಕೆಯ ಯಶಸ್ಸಿಗೆ ಕಾರಣರಾಗಿದ್ದಾರೆ. ಇವರಿಗೆ ನಮ್ಮ ಪ್ರೀತಿಪೂರ್ವಕ ಕೃತಜ್ಞತೆಗಳು. – ಸಂಪಾದಕ ಮಂಡಳಿ**

''ಜನ್ಮನಾ ಜಾಯತೇ ಜಂತುಃ ಸಂಸ್ಕಾರಾತ್ ದ್ವಿಜ ಉಚ್ಯತೇ।
ವೇದಾಭ್ಯಾಸೇನ ವಿಪ್ರತ್ವಂ ಬ್ರಹ್ಮಜ್ಞಾನೇನ ಬ್ರಾಹ್ಮಣಾ ।।''

''ದುರ್ಲಭಂ ಮಾನುಷಂ ಜನ್ಮಂ'' ಎನ್ನಲಾಗುತ್ತದೆ.

ಹಿಂದಿನ ಹಲವಾರು ಜನ್ಮಗಳಲ್ಲಿ ಪುಣ್ಯ ಕಾರ್ಯಗಳನ್ನೆಸಗಿ ಮಾನವ ಜನ್ಮವನ್ನು ಪಡೆಯುತ್ತಾನೆ ಎಂಬ ಮಾತಿದೆ. ದೊರಕಿದಂತಹ ಈ ಮಾನವ ಜನ್ಮವನ್ನು ಸಾರ್ಥಕಪಡಿಸಿಕೊಂಡು ಬಾಳಬೇಕಾದುದು ಮಾನವನ ಕರ್ತವ್ಯ. ಅದರಲ್ಲೂ ಮಾನವ ಜನ್ಮದಲ್ಲಿ ಬ್ರಾಹ್ಮಣ ಜನ್ಮ ಯಾ ಬ್ರಾಹ್ಮಣನಾಗಿ ಹುಟ್ಟುವುದು ಅತ್ಯಂತ ಪುಣ್ಯಕರವಾದುದು. ಇಂದಿನ ಸಮಾಜದಲ್ಲಿ ಕೆಲವರು ತಮ್ಮ ಬ್ರಾಹ್ಮಣ ಜಾತಿಯ ಕುರಿತು ಕೀಳರಿಮೆ ಉಳ್ಳವರೂ ಇರುವವರು. ತಾನು ಬ್ರಾಹ್ಮಣನಾಗಿ ಏಕೆ ಹುಟ್ಟಿದೆನೋ ಎಂದು ಚಿಂತಿಸುವವರೂ, ಹುಟ್ಟಿನ ಕುರಿತಾದಂತಹ ದುರಾಗ್ರಹ ಉಳ್ಳವರೂ ಇರುವವರೆಂಬುದು ಬೇಸರದ ಸಂಗತಿ. ಹುಟ್ಟಿದಾಗ ಮನುಷ್ಯನು ಕೇವಲ ಒಂದು ಜಂತುವಿಗೆ ಸಮನಾಗಿರುವನು. ಸಂಸ್ಕಾರದಿಂದ ಆತನು 'ದ್ವಿಜನೆನಿಸಿ, ಉಚ್ಚ ಸ್ಥಾನವನ್ನು ಪಡೆಯುವನು. 'ಬ್ರಹ್ಮೋಪದೇಶ' ವನ್ನು ಕೊಟ್ಟಾಗ ಆತನಿಗೆ ಮತ್ತೊಂದು ಕಣ್ಣನ್ನೇ ಕೊಟ್ಟಂತಾಗುತ್ತದೆ. ಆದ್ದರಿಂದಲೇ ಈ ಸಂಸ್ಕಾರಕ್ಕೆ 'ಉಪ-ನಯನ' ಎಂದು ಹೇಳಲಾಗುತ್ತದೆ. ಇದರ ನಂತರ ಅವನು ಮರುಹುಟ್ಟನ್ನು ಪಡೆದು 'ದ್ವಿಜ'ನೆನಿಸುವನು. ವೇದಾಭ್ಯಾಸವನ್ನು ಮಾಡುವುದರಿಂದ ವಿಪ್ರತ್ವವು ಅವನಿಗೆ ಪ್ರಾಪ್ತವಾಗುತ್ತದೆ. ಹಾಗೆಯೇ ಬ್ರಹ್ಮಜ್ಞಾನ ಅಂದರೆ ವೇದವನ್ನು ತಿಳಿದವನು ಬ್ರಾಹ್ಮಣನೆನಿಸುವನು. ಆದ್ದರಿಂದ ''ಬ್ರಹ್ಮ-ವೇದ ತದಧೀತೇ ಇತಿ ಬ್ರಾಹ್ಮಣಃ'' ಎಂಬುದು. 'ಬ್ರಾಹ್ಮಣ' ಪದದ ವ್ಯುತ್ಪತ್ತಿಯು ವೇದವು ಅಥವಾ ಬ್ರಹ್ಮವು ಅಭಿವ್ಯಕ್ತವಾಗುವ ನೆಲೆಯಾದ್ದರಿಂದ ಬ್ರಾಹ್ಮಣನಿಗೆ 'ವೇದಾವಾಸ' ಎಂಬ ನಾಮಾಂತರವೂ ಉಂಟು. ಸಮಸ್ತ ದೇವತೆಗಳೂ ಅಭಿವ್ಯಕ್ತವಾಗಲು ಅನುಕೂಲವಾದ ದೇಹವಾದ್ದರಿಂದ 'ಭೂಸುರ' ಅಥವಾ 'ಭೂದೇವ' ಎಂಬ ಅನ್ವರ್ಥನಾಮಗಳೂ ಬ್ರಾಹ್ಮಣನಿಗೆ ಬಂದಿರುವುವು. ವೇದಾಧ್ಯಯನವು ಬ್ರಾಹ್ಮಣನಿಗೆ ಅತ್ಯಂತ ಪ್ರಮುಖವಾದುದು. ಮರದಿಂದ ಆನೆಯ ಗೊಂಬೆಯೊಂದನ್ನು ಮಾಡಿ ನಿಲ್ಲಿಸಿದರೆ, ಚರ್ಮದಿಂದ ಹರಿಣ ಯಾ ಇತರ ಯಾವುದೇ ಮೃಗವೊಂದನ್ನು ಮಾಡಿ ನಿಲ್ಲಿಸಿದರೆ ಅವುಗಳು ಹೇಗೆ ನಿರರ್ಥಕವೋ ಹಾಗೆಯೇ ವೇದಾಧ್ಯಯನ ವಿಲ್ಲದ ಬ್ರಾಹ್ಮಣನ ಜನ್ಮವೂ ನಿರರ್ಥಕ ವಾದುದು. ವೇದಾಧ್ಯಯನ ವೆಂದರೆ ಕೇವಲ ಸಂಸ್ಕೃತದ ಶ್ಲೋಕಗಳ ಪಠನ ಯಾ ಕಂಠಪಾಠ ಮಾತ್ರವಲ್ಲ, ಅವುಗಳ ಅನುಸಂಧಾನವು ಆಯಾ ದೇವತೆಗಳನ್ನು ದರ್ಶನ ಮಾಡಿಸುವ ಸಾಧನವಾಗಿದೆ.

ಇಂತಹ ಬ್ರಾಹ್ಮಣನಿಗೆ ಕೆಲವೊಂದು ಆಚಾರ-ವಿಚಾರಗಳು ಹೇಳಲ್ಪಟ್ಟಿವೆ. ಆಹಾರ, ವಿಹಾರ, ಸ್ನೇಹ, ಸಂಬಂಧ, ವಿದ್ಯಾ, ವಿನಯ, ದೃಢಚಿತ್ತ ಮೊದಲಾದುವು ಬ್ರಾಹ್ಮಣನಿಗೆ ವಿಧಿಸಲ್ಪಟ್ಟ ಆಚಾರ-ವಿಚಾರಗಳು ಯಾ ನೀತಿ ಸಂಹಿತೆಗಳು. ಇವುಗಳನ್ನು ಚಾಚೂ ತಪ್ಪದೇ ಪಾಲಿಸಿಕೊಂಡು ಬರುವುದು ಬ್ರಾಹ್ಮಣನ ಕರ್ತವ್ಯ. ವೇದಾಧ್ಯಯನದ ಬಗ್ಗೆ ಈ ಮೊದಲೇ ಹೇಳಿದೆ. ಇವುಗಳೆಲ್ಲದರೊಂದಿಗೆ ಪರಪೀಡನಾದಿ ಪಿಡುಗುಗಳಿಂದ ದೂರವಿದ್ದು, ಶೌಚಾದಿ ನಿಯಮಗಳನ್ನು ಪಾಲಿಸುತ್ತಿದ್ದು, ಪುರಾಣ ವಾಚನ, ಸತ್ ವ್ಯವಹಾರ, ಸತ್ಕರ್ಮಗಳನ್ನು ನಡೆಸುತ್ತಿದ್ದು, ಸಮಾಜದ ಹಾಗೂ ಆತ್ಮದ ಏಳಿಗೆಗಾಗಿ ದುಡಿಯುತ್ತಿರುವುದು ಬ್ರಾಹ್ಮಣನ ದಿನಚರಿಯಾಗಿರಬೇಕು. ಲೌಕಿಕ ವ್ಯವಹಾರ-ಜಂಜಾಟಗಳಿಂದ ತುಸು ಕಾಲವಾದರೂ ದೂರವಿದ್ದು ಅಧ್ಯಾತ್ಮದ ಚಿಂತನೆಯನ್ನು ನಡೆಸಬೇಕಾದುದು ಬ್ರಾಹ್ಮಣನ ಕರ್ತವ್ಯಗಳಲ್ಲೊಂದು. ಪ್ರಾಚೀನ ಭಾರತದಲ್ಲಿ ಚತುರ್ವರ್ಣಗಳು ಬಳಕೆಯಲ್ಲಿದ್ದುವು. ಇವುಗಳು ಅವರವರ ವೃತ್ತಿಗಳ ಮೇಲಿಂದ ಬಂದುವುಗಳೆಂದು ಹೇಳಲಾಗುತ್ತದೆ. ಯಜ್ಞ-ಯಾಗಾದಿಗಳು, ದೇವತಾರ್ಚನೆಗಳ ಮೂಲಕ ಲೋಕ ಕಲ್ಯಾಣವನ್ನು ಸಾಧಿಸುವವರು ಬ್ರಾಹ್ಮಣರೆಂದೂ, ಪ್ರಜೆಗಳನ್ನು ತಮ್ಮ ಭುಜಬಲದಿಂದ ಆಳುತ್ತಿದ್ದವರು ಕ್ಷತ್ರಿಯರೆಂದೂ, ವ್ಯವಸಾಯ, ವ್ಯಾಪಾರ ಇತ್ಯಾದಿಗಳಿಂದ ತಮ್ಮ ಜೀವನ ಸಾಗಿಸುವುದರೊಂದಿಗೆ ಸಮಾಜಕ್ಕೆ ಒಳಿತನ್ನುಂಟು ಮಾಡುತ್ತಿದ್ದವರು ವೈಶ್ಯರೆಂದೂ, ಈ ಮೂರು ವರ್ಗಗಳ ಊಳಿಗ ವೃತ್ತಿಯನ್ನು ಮಾಡುತ್ತಿದ್ದವರು ಶೂದ್ರರೆಂದೂ ಗುರುತಿಸಲ್ಪಟ್ಟರು. ಇದನ್ನೇ ಶಾಸ್ತ್ರಕಾರರು ಬ್ರಾಹ್ಮಣರು ಪರಮಾತ್ಮನ (ವಿಷ್ಣುವಿನ) ಮುಖದಲ್ಲಿ ಹುಟ್ಟಿದರೆಂದೂ, ಕ್ಷತ್ರಿಯರು ಬಾಹುಗಳಿಂದ ಜನಿಸಿದರೆಂದೂ, ಕಟಿ (ಸೊಂಟ) ಪ್ರದೇಶದಿಂದ ವೈಶ್ಯರೂ, ಪಾದದಿಂದ ಶೂದ್ರರೂ ಜನಿಸಿದರು ಎಂದು ವಿವರಿಸಿದರು. ಇವುಗಳೆಲ್ಲ ಕೇವಲ ಕಲ್ಪನೆಗಳಾದರೂ ಸೂಕ್ಷ್ಮವಾಗಿ ಗಮನಿಸಿದರೆ ಈ ವಿವರಣೆಯ ಅಂತರಾರ್ಥವು ಗೋಚರವಾಗುತ್ತದೆ. ತನ್ನ ಜೀವಮಾನವಿಡೀ ಮಂತ್ರೋಚ್ಚಾರಣೆ, ವೇದಾಧ್ಯಯನ, ಶುದ್ಧ ಮಾತುಕತೆ, ಪರೋಪದೇಶ, ಅಧ್ಯಾಪನ ಇತ್ಯಾದಿಗಳಲ್ಲಿ ನಿರತನಾಗಿರಬೇಕಾದ ಬ್ರಾಹ್ಮಣನಿಗೆ ಜಿಹ್ವೆಯೇ ಶ್ರೇಷ್ಠವಾದುದು ಮತ್ತು ಪ್ರಮುಖ ಅಂಗವಾದುದು. ಆದ್ದರಿಂದಲೇ ಮುಖದಿಂದ ಬ್ರಾಹ್ಮಣ ಜನಿಸಿದ ಎಂಬುದು ಸಮರ್ಪಕವಾದುದು. ತನ್ನ ಬಾಹುಬಲದಿಂದ ದುಷ್ಟ ಶಿಕ್ಷಣ, ಶಿಷ್ಟ ರಕ್ಷಣ ಕಾರ್ಯಗಳಲ್ಲಿ ನಿರತನಾಗಿರಬೇಕಾದ ಕ್ಷತ್ರಿಯನಿಗೆ ಬಾಹುಗಳೇ ಪ್ರಮುಖ ಅಂಗಗಳು. ಪರಮಾತ್ಮನ ಅಂತಹ ಬಾಹುಗಳಿಂದ ಕ್ಷತ್ರಿಯ ಉದಿಸಿದ ಎಂಬುದು ಅನ್ವರ್ಥವಾಗಿದೆ. ಕೃಷಿ-ವ್ಯವಸಾಯಾದಿಗಳನ್ನು ನಡೆಯಿಸುವ ವೈಶ್ಯನಿಗೆ ದೈಹಿಕ ಸಾಮರ್ಥ್ಯವು ಮುಖ್ಯವಾದುದು. ಆದ್ದರಿಂದ ಆತನು ಕಟಿ (ಸೊಂಟ)ಯಿಂದ ಉದ್ಭವಿಸಿದನೆಂಬುದರಲ್ಲಿ ಅರ್ಥವೇ ತುಂಬಿದೆ. ನಾಲ್ಕು ವರ್ಗಗಳಲ್ಲಿ ಕೊನೆಯವನಾಗಿದ್ದು, ಇತರರ ಕಾಲಬುಡದಲ್ಲಿಯೇ ಉಪಸ್ಥಿತನಿರಬೇಕಾದವನಾದ್ದರಿಂದ ಶೂದ್ರನು ಪಾದದಿಂದ ಉದಿಸಿದನೆಂಬುದು ಸಮರ್ಪಕವೇ ಆಗಿದೆಯೆನ್ನಬಹುದು.

ಕೃತ, ತ್ರೇತಾ, ದ್ವಾಪರ ಮತ್ತು ಕಲಿಯೆಂಬ ನಾಲ್ಕು ಯುಗಗಳನ್ನು ಹೆಸರಿಸಲಾಗುತ್ತದೆ. ಇವುಗಳಲ್ಲಿ ಮೊದಲನೆಯದಾದ ಕೃತಯುಗದಲ್ಲಿ ಯಜ್ಞ-ಯಾಗಾದಿಗಳನ್ನು ವಿಶೇಷವಾಗಿ ನಡೆಯಿಸುತ್ತಿದ್ದ ಬ್ರಾಹ್ಮಣರದ್ದೇ ಪ್ರಾಬಲ್ಯವಿದ್ದ ಕಾಲವಿತ್ತು. ಇತರ ವರ್ಣಗಳವರು ಕೃತಯುಗದಲ್ಲಿ ಇದ್ದಿಲ್ಲವೆಂಬ ಒಂದು ವಾದವೂ ಇದೆ.

''ಜೀವಿತಂ ಯಸ್ಯ ಧರ್ಮಾರ್ಥಂ ಧರ್ಮೋ ರಕ್ಷಾರ್ಥ ಮೇವಚ। ಅಹೋರಾತ್ರಂಚ ಪುಣ್ಯಾರ್ಥಂ ತಂ ದೇವಾ ಬ್ರಾಹ್ಮಣಂ ವಿದುಃ।। ''ಯಾರ ಜೀವಿತವು ಧರ್ಮಕ್ಕಾಗಿದೆಯೋ, ಧರ್ಮವು ಆನಂದಾನುಭವಕ್ಕಾಗಿ ಇದೆಯೋ, ಅಹೋರಾತ್ರಗಳು, ಪುಣ್ಯ ಸಂಪಾದನೆಗಾಗಿ ಇವೆಯೋ ಅವನನ್ನು ದೇವತೆಗಳು ಬ್ರಾಹ್ಮಣನೆನ್ನುತ್ತಾರೆ'' ಎಂದಿದೆ. ಈ ರೀತಿಯಲ್ಲಿ ಜ್ಞಾನಾನಂದಗಳಿಗಾಗಿ ಅಹೋರಾತ್ರಿಗಳನ್ನು ಮುಡುಪಾಗಿಟ್ಟು, ಜ್ಞಾನಾನಂದ ನಿಧಿಯಾಗಿ, ವಿದ್ಯಾ ನಿಧಿಯಾಗಿ ಬದುಕುವವನಾದ್ದರಿಂದ ಅವನಿಗೊಂದು ಹಿರಿತನ ಬಂದಿರುವುದು. ಅದು ಜ್ಞಾನ ಮತ್ತು ಆನಂದಗಳಿಂದ ಬಂದ ಹಿರಿತನ. ಆಗ 'ವರ್ಣಾನಾಂ ಬ್ರಾಹ್ಮಣೋ ಗುರುಃ' 'ವರ್ಣನೆಗಳಿಗೆಲ್ಲ ಬ್ರಾಹ್ಮಣನು ಗುರು' ಎಂಬ ಮಾತು ಚರಿತಾರ್ಥವಾಗುತ್ತದೆ. ಹಾಗೆಯೇ ಮುಂದುವರಿದು ಬ್ರಾಹ್ಮಣನ ಲಕ್ಷಣಗಳನ್ನು ಕುರಿತು ಹೇಳುತ್ತಾ...

''ಕ್ಷಮಾ ದಯಾ ಚ ವಿಜ್ಞಾನಂ ಸತ್ಯಂ ಚೈವ ದಮಃ ಶಮಃ। ಅಧ್ಯಾತ್ಮಂ ಸತ್ಯತಾಜ್ಞಾನಂ ಏತದ್ ಬ್ರಾಹ್ಮಣ ಲಕ್ಷಣಮ್ ।।'' ಕ್ಷಮೆ, ದಯೆ, ವಿಜ್ಞಾನ (ವಿಶೇಷವಾದ ಜ್ಞಾನ), ಸತ್ಯ, ದಮ, ಶಮ, ಅಧ್ಯಾತ್ಮ ನಿತ್ಯಾನಿತ್ಯ ವಿವೇಕ – ಇವು ಬ್ರಾಹ್ಮಣ ಲಕ್ಷಣ ಎಂಬ ಮಾತು ಮನನೀಯವಾಗಿದೆ. ಇಂತಹ ಲಕ್ಷಣಗಳುಳ್ಳವನೇ ನಿಜವಾದ ಬ್ರಾಹ್ಮಣ! ಬ್ರಾಹ್ಮಣನ ಬದುಕು ಅವನ ಜನ್ಮ ಸಹಜವಾದ ಲಕ್ಷ್ಯದತ್ತ ಸಾಗದೆ ಕೇವಲ ಉದರಂಭರಣಕ್ಕಾಗಿ ಮಾತ್ರ ಸಾಗುತ್ತಿರುವುದು ದುರಂತದ ಸಂಗತಿ. ಹಾಗಾಗಬಾರದು. ಲೌಕಿಕ ವ್ಯವಹಾರಗಳಿಂದ ಬ್ರಾಹ್ಮಣರು ಕೊಂಚವಾದರೂ ವಿಮುಖರಾಗಿ ಆತ್ಮ ಸಾಧನೆಯತ್ತ ಗಮನ ಹರಿಸಬೇಕು. ಈ ದಿಸೆಯಲ್ಲಿ ಆದಿಕಾಲದ ಬ್ರಾಹ್ಮಣರು ಋಜುಮಾರ್ಗದಲ್ಲಿ ಸಾಗುತ್ತಿದ್ದರು. ಸೃಷ್ಟಿಯ ವಿಕಾಸದ ಮೊದಲ ಹಂತದಲ್ಲಿ ರೂಪುಗೊಂಡದ್ದರಿಂದ 'ಅಗ್ರಜನ್ಮ' ಎಂಬುದು ಬ್ರಾಹ್ಮಣನ ಮತ್ತೊಂದು ಹೆಸರಾಗಿದೆ.

## ಶ್ರೀಶಾರದಾ ಮಂಟಪದಲ್ಲಿ ಸಾಮೂಹಿಕ ಉಪನಯನ ಹಾಗೂ ಶಂಕರ ಜಯಂತಿ ಆಚರಣೆ

(...1ನೇ ಪುಟದಿಂದ)

ವಿತರಣೆ ಹಾಗೂ ಅನ್ನಸಂತರ್ಪಣೆಯೂ ನೆರವೇರಿತು.



**ಶ್ರೀಶಾರದಾ ಮಂಟಪದಲ್ಲಿ ಭಾವಚಿತ್ರ ಅನಾವರಣ :**

ಉಡುಪಿ ಚಿಟ್ಪಾಡಿಯ ದಿ। ಕೃಷ್ಣಯ್ಯ ಶ್ಯಾನುಭಾಗ್ ಹಾಗೂ ದಿ। ಗಿರಿಜಾ ದಂಪತಿಗಳ ಮತ್ತು ದಿ। ಸುಂದರಿ ಬಿ. ರಾವ್ (ಶ್ರೀ ಚಿಟ್ಪಾಡಿ ಭುಜಂಗರಾಯರ ಧರ್ಮಪತ್ನಿ) ಇವರ ಭಾವಚಿತ್ರವನ್ನು ತಾ.1-5-2009ರಂದು ಉಡುಪಿಯ ಶ್ರೀಶಾರದಾ ಮಂಟಪದಲ್ಲಿ ಚಿಟ್ಪಾಡಿ ಭುಜಂಗರಾಯರು ಅನಾವರಣ ಗೊಳಿಸಿದರು. ಚಿಟ್ಪಾಡಿ ಭುಜಂಗರಾಯರು ತಮ್ಮ ದಿವಂಗತ ಮಾತಾಪಿತರ ನೆನಪಿನಲ್ಲಿ ರೂ.50,000/-ವನ್ನು ಉಡುಪಿಯ ಶ್ರೀಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘಕ್ಕೆ ಹಾಗೂ ಪತ್ನಿ ದಿ। ಸುಂದರಿ ಬಿ. ರಾವ್ ನೆನಪಿನಲ್ಲಿ ರೂ.25,000/-ವನ್ನು ಸಂಘದ ವಿದ್ಯಾರ್ಥಿ ವೇತನ ನಿಧಿಗೆ ಸಮರ್ಪಿಸಿದ್ದಾರೆ.

ಈ ಸಂದರ್ಭದಲ್ಲಿ ದಿವಂಗತರ ಗುಣಗಾನ ಹಾಗೂ ಶ್ರೀ ಭುಜಂಗರಾವ್ ಮತ್ತು ಮಕ್ಕಳ ಪರಿಚಯವನ್ನು ಸಂಘದ ಅಧ್ಯಕ್ಷರಾದ ಶ್ರೀ ಸಿ.ಎಸ್.ರಾಯರು ಮಾಡಿದರು. ಶ್ರೀ ಭುಜಂಗರಾಯರ ಮಕ್ಕಳು ಹಾಗೂ ಸಂಘದ ಕಾರ್ಯದರ್ಶಿ ಶ್ರೀ ವೇಣು ಗೋಪಾಲ್‌ರಾವ್, ಕೋಶಾಧಿಕಾರಿ ಶ್ರೀ ಸದಾನಂದರಾಯರು ಉಪಸ್ಥಿತರಿದ್ದರು.

ಚಿಟ್ಪಾಡಿ ಭುಜಂಗರಾವ್ ಮತ್ತು ಮಕ್ಕಳ ಈ ಕೊಡುಗೆಯನ್ನು ಸಂಘವು ಕೃತಜ್ಞತಾ ಪೂರ್ವಕವಾಗಿ ಸ್ವೀಕರಿಸಿದೆ.

ವರದಿ : **ಕೃಷ್ಣಕುಮಾರ್, ಮಟ್ಟು**

**ಸಾಮೂಹಿಕ ಗಣಹೋಮ**

ಶ್ರೀಶಾರದಾ ದೇವಸ್ಥಾನದಲ್ಲಿ ಪ್ರತಿ ತಿಂಗಳು **ಸಂಕಷ್ಟಹರ ಚತುರ್ಥಿಯಂದು** ನಡೆಯುತ್ತಿರುವ

**ಸಾಮೂಹಿಕ ಗಣಹೋಮವು**

ತಾ.11-06-2009ರಂದು ನಡೆಯಲಿದೆ.

**ಗಣಹೋಮ ಸೇವಾ ಶುಲ್ಕ ರೂ.51/-**

ಗಣಹೋಮ ಸೇವೆ ನೀಡಲು ಇಚ್ಛಿಸುವವರು ಶಾರದಾ ಮಂಟಪದ ಮೆನೇಜರ್‌ರವರನ್ನು ಸಂಪರ್ಕಿಸಲು ಕೋರಲಾಗಿದೆ.

**- ಶ್ರೀಶಾರದಾ ದೇವಸ್ಥಾನ ವೇದಿಕೆ**

ಶ್ರೀಶಾರದಾ ದೇವಸ್ಥಾನದಲ್ಲಿ

**ಏಪ್ರಿಲ್ ತಿಂಗಳಲ್ಲಿ**

**ತಾ.13-06-2009ರ ಶನಿವಾರ**

ಸಂಜೆ ಗಂಟೆ 5-00ರಿಂದ

**ಗಮಕವಾಚನ-ಪ್ರವಚನ**

ಕಾರ್ಯಕ್ರಮವು ನಡೆಯಲಿದೆ.

ವಾಚನ : ಭಾಗವತ, ಗಮಕಿ ನೀಲಾವರ **ಲಕ್ಷ್ಮೀನಾರಾಯಣರಾವ್**

ಪ್ರವಚನ : ಹವ್ಯಾಸಿ ತಾಳಮದ್ದಳೆ ಅರ್ಥಧಾರಿ, ನಾಟಕಕಾರ, ಪ್ರವಚನಕಾರ **ಶ್ರೀ ಬಾರ್ಕೂರು ನಾಗೇಶರಾವ್.**

**ಸರ್ವರಿಗೂ ಆದರದ ಸ್ವಾಗತ**

**- ಶ್ರೀಶಾರದಾ ದೇವಸ್ಥಾನ ವೇದಿಕೆ**

**PRAMOD**
AUTOMOBILES
KARANGALPADY, MANGALORE -575 003.
Ph : 2491723 (O)
2493633 (H.O.)
2212723 (R)
: Wholesale & Retail Dealers in :
2 & 3 WHEELERS SPARES & ACCESSORIES
Prop. :Ln.K. HARSHA KUMAR

## ಮಾಂಗಲ್ಯಂ ತಂತುನಾನೇನ ....

ಹಿರಿಯಡಕ ಆಳುಗ್ಗೇಲು ಶ್ರೀಮತಿ ಅನಿತಾ ಮತ್ತು ಶ್ರೀ ಮಾಧವ ರಾವ್ ಇವರ ಪುತ್ರಿ **ಮಾನಸ** ಹಾಗೂ ಕರಂದಾಡಿ ಶ್ರೀಮತಿ ವಸಂತಿ ಮತ್ತು ಶ್ರೀ ರಘುರಾಮರಾಯರ ಪುತ್ರ **ದೇವರಾಜ್** ಇವರ ವಿವಾಹವು ತಾ.27-4-2009ರಂದು ಉಡುಪಿ ಕುಂಜಿಬೆಟ್ಟು ಶ್ರೀಶಾರದಾ ಕಲ್ಯಾಣ ಮಂಟಪದಲ್ಲಿ ನೆರವೇರಿತು.

★★★★

ಸುರತ್ಕಲ್ ತಡಂಬೈಲಿನಲ್ಲಿರುವ ಶ್ರೀಮತಿ ಉಷಾ ಮತ್ತು ಶ್ರೀ ಎಸ್. ಪ್ರಭಾಕರ ರಾಯರ ಪುತ್ರ **ಕಿರಣ್‌ಕುಮಾರ್** ಹಾಗೂ ಬೈಕಾಡಿಯ ಶ್ರೀಮತಿ ಪುಷ್ಪಮತ್ತು ಶ್ರೀ ಭಾಸ್ಕರರಾಯರ ಪುತ್ರಿ **ಸ್ವಾತಿ** ಇವರ ವಿವಾಹವು ತಾ.8-5-2009ರಂದು ಪುನರೂರು ಶ್ರೀ ವಿಶ್ವನಾಥ ದೇವಸ್ಥಾನದ ಕಲ್ಯಾಣ ಮಂಟಪ ದಲ್ಲಿ ನೆರವೇರಿತು.

★★★★

ಶ್ರೀಮತಿ ಮತ್ತು ಶ್ರೀ ಗೋಪಾಲಕೃಷ್ಣ ರಾವ್ ಸಿಲ್ಲ ಇವರ ಪುತ್ರ **ರಾಮಚಂದ್ರ** ಹಾಗೂ ಶ್ರೀಮತಿ ಮತ್ತು ಶ್ರೀ ರಾಘವೇಂದ್ರ ರಾವ್ ಪಡುಬೆಳ್ಳೆ ಇವರ ಪುತ್ರಿ **ಜ್ಯೋತಿ** ಇವರ ವಿವಾಹವು ತಾ.10-5-2009 ರಂದು ಪುತ್ತೂರು ಕಟ್ಟಾರೆಯ ಶ್ರೀ ರಾಘವೇಂದ್ರ ಸ್ವಾಮಿ ಕಲ್ಯಾಣ ಮಂಟಪದಲ್ಲಿ ನೆರವೇರಿತು.

★★★★

ಉಳ್ತೂರು ಶ್ರೀಮತಿ ಮತ್ತು ಶ್ರೀ ಶಾಂತರಾಜ ಇವರ ಪುತ್ರ **ಗುರುಪ್ರಸಾದ್** ಹಾಗೂ ಕೋಟ ಗಿಳಿಯಾರು ಶ್ರೀಮತಿ ಮತ್ತು ಶ್ರೀ ಶ್ರೀನಿವಾಸ ನಾವಡ ಇವರ ಪುತ್ರಿ **ಸುಷ್ಮಾ** ಇವರ ವಿವಾಹವು ತಾ.27-4-2009ರಂದು ಕೋಟ ಶ್ರೀ ಮಾಂಗಲ್ಯ ಮಂದಿರದಲ್ಲಿ ನೆರವೇರಿತು.

★★★★

ಶ್ರೀಮತಿ ಶೋಭಾ ಮತ್ತು ಬೆಳ್ಳೆ ಅಮೃತ ಕುಮಾರ್ ಇವರ ಪ್ರಥಮ ಪುತ್ರ **ನಮಿತ್** ಹಾಗೂ ಶ್ರೀಮತಿ ಪ್ರಫುಲ್ಲಾ ಮತ್ತು ಶ್ರೀ ನವೀನ್‌ಚಂದ್ರ ರಾವ್ ಇವರ ಪುತ್ರಿ **ನಿಶಾ** ಇವರ ವಿವಾಹವು ತಾ.27-4-2009ರಂದು ಉಡುಪಿ ಚಿಟ್ಪಾಡಿಯ ಶ್ರೀಶಾರದಾಂಬಾ ದೇವಸ್ಥಾನದ ಸಭಾಸದನದಲ್ಲಿ ನೆರವೇರಿತು.

★★★★

ಶ್ರೀಮತಿ ವಸಂತಿ ಮತ್ತು ಶ್ರೀ ಬನ್ನಂಜೆ ಗುರುರಾಜರಾಯರ ಪುತ್ರ **ಉಮೇಶ** ಹಾಗೂ ಶ್ರೀಮತಿ ಶ್ಯಾಮಲಾ ಮತ್ತು ಶ್ರೀ ಮೋಹನ ಸುಬ್ರಾಯ ಶ್ಯಾನುಭಾಗರ ಪುತ್ರಿ **ಪೂಜಾ** ಇವರ ವಿವಾಹವು ತಾ.8-5-2009ರಂದು ಉಡುಪಿ ಕುಂಜಿಬೆಟ್ಟು ಶ್ರೀಶಾರದಾ ಕಲ್ಯಾಣ ಮಂಟಪದಲ್ಲಿ ನೆರವೇರಿತು.

## ವೃಷಭ ಮಾಸದ ವಿಶೇಷ ದಿನಗಳು

| | |
|---|---|
| 14-05-2009 | ವೃಷಭ ಸಂಕ್ರಮಣ |
| 20-05-2009 | ಸರ್ವೈಕಾದಶೀ |
| 24-05-2009 | ಅಮಾವಾಸ್ಯಾ |
| 25-05-2009 | ರೋಹಿಣೀ ನಕ್ಷತ್ರಾರಂಭ, ಪ್ರದೋಷಃ |
| 02-06-2009 | ಭಾಗೀರಥೀ ಜನ್ಮದಿನ |
| 03-06-2009 | ಸರ್ವೈಕಾದಶೀ |
| 05-06-2009 | ಪ್ರದೋಷಃ |
| 07-06-2009 | ಪೂರ್ಣಿಮಾ |
| 08-06-2009 | ಮೃಗಶಿರಾ ನಕ್ಷತ್ರಾರಂಭ |
| 11-06-2009 | ಸಂಕಷ್ಟಹರ ಚತುರ್ಥೀ (ಚಂದ್ರೋದಯ ರಾತ್ರಿ, ಗಂ.9.45ಕ್ಕೆ) |
| 14-06-2009 | ಮಿಥುನ ಸಂಕ್ರಮಣ |

## ಅಭಿನಂದನೆ

### ವೈ. ನವನೀತ್‌ರಾವ್



**ವಿಶಿಷ್ಟ ಶ್ರೇಣಿಯಲ್ಲಿ ತೇರ್ಗಡೆ**

2008-09ನೇ ಸಾಲಿನ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಉಡುಪಿ -ಇಂದ್ರಾಳಿ ಆಂಗ್ಲ ಮಾಧ್ಯಮ ಶಾಲೆಯ ವಿದ್ಯಾರ್ಥಿ ವೈ. ನವನೀತ್ ರಾವ್ ಶೇ.91.52 (572) ಅಂಕಗಳಿಸಿರುತ್ತಾನೆ. ಈತ ಇಂದ್ರಾಳಿಯಲ್ಲಿ ವಾಸ್ತವ್ಯವಿರುವ ಎಲ್ಲೂ ಪ್ರಕಾಶ್‌ಕುಮಾರ್ ಮತ್ತು ಶ್ರೀಮತಿ ಗಾಯತ್ರಿ ಕಡಬ ಇವರ ಸುಪುತ್ರ. ಈತನ ಸಾಧನೆಗೆ ಶ್ರೀಶಾರದಾ ಅಭಿನಂದನೆಗಳು.

### ಅವಿನಾಶ್ ರಾವ್



**ವಿಶಿಷ್ಟ ಶ್ರೇಣಿಯಲ್ಲಿ ತೇರ್ಗಡೆ**

2008-09ನೇ ಸಾಲಿನಲ್ಲಿ ಧರ್ಮಸ್ಥಳ ಮಂಜುನಾಥೇಶ್ವರ ಮೆಡಿಕಲ್ (ಡೆಂಟಲ್) ಕಾಲೇಜಿನಿಂದ ಬಿ.ಡಿ.ಎಸ್. ಪರೀಕ್ಷೆ ಎದುರಿಸಿದ ಅವಿನಾಶ್ ರಾವ್ ಅವರು ಬಿ.ಡಿ.ಎಸ್.ನಲ್ಲಿ ಉನ್ನತ ಶ್ರೇಣಿಯಲ್ಲಿ ತೇರ್ಗಡೆಯಾಗಿದ್ದಾರೆ. ಅವರು ಕಟಪಾಡಿ ಮೂಡುಬೆಟ್ಟು ಶ್ರೀ ಉಮೇಶ್ ರಾವ್ ಮತ್ತು ಶ್ರೀಮತಿ ಪ್ರಜ್ವಲ್‌ರಾವ್‌ರವರ ಪುತ್ರ. ಅವಿನಾಶ್‌ರವರಿಗೆ ಶ್ರೀಶಾರದಾ ಅಭಿನಂದನೆಗಳು.

### ಕುಮಾರಿ ರಶ್ಮಿ



**ಆದರ್ಶ ವಿದ್ಯಾರ್ಥಿನಿ ಪ್ರಶಸ್ತಿ**

ಕುಮಾರಿ ರಶ್ಮಿ ಧಾರವಾಡ ಜಿಲ್ಲಾ ಮಟ್ಟದ ಗಣಿತ ಪರೀಕ್ಷೆಯಲ್ಲಿ ಪ್ರಥಮ ಬಹುಮಾನ ಪಡೆದು ಆದರ್ಶ ವಿದ್ಯಾರ್ಥಿನಿ ಎಂದು ಪ್ರಶಸ್ತಿ ಪಡೆದಿರುತ್ತಾಳೆ. ಈಕೆ ಧಾರವಾಡದ ಕರ್ನಾಟಕ ಬ್ಯಾಂಕಿನ ಹಿರಿಯ ಶಾಖಾಧಿಕಾರಿಗಳಾದ ಶ್ರೀ ದಿವಾಕರ ಕೆ.ಎಸ್. ಮತ್ತು ಶ್ರೀಮತಿ ವಿಜಯಲಕ್ಷ್ಮೀ ಇವರ ಸುಪುತ್ರಿ. ಕುಮಾರಿ ರಶ್ಮಿಯ ಈ ಸಾಧನೆಗೆ ಶ್ರೀಶಾರದಾ ಅಭಿನಂದನೆಗಳು.

### ಡಾ। ಸಂದೀಪ ಶಾಸ್ತ್ರಿಯವರಿಗೆ ಪದೋನ್ನತಿ

ಬೆಂಗಳೂರಿನ ಜೈನ್ ಕ್ರಿಯೇಟಿವ್ ಇನ್‌ಸ್ಟಿಟ್ಯೂಟ್‌ನಲ್ಲಿದ್ದ ಡಾ। ಸಂದೀಪ ಶಾಸ್ತ್ರಿ ಯವರು (ವಾಸುದೇವ ಶಾಸ್ತ್ರಿಯವರ ಪುತ್ರ) ಜೈನ್ ಗ್ಲೋಬಲ್ ಯುನಿವರ್ಸಿಟಿ ಬೆಂಗಳೂರು ಇಲ್ಲಿ ಪ್ರೊ-ವೈಸ್‌ಚಾನ್ಸಲರ್ ಆಗಿ ನೇಮಕಗೊಂಡಿದ್ದಾರೆ. ಇವರಿಗೆ ಶ್ರೀಶಾರದಾ ಅಭಿನಂದನೆಗಳು.

★★★★

### ವಿಠಲರಾವ್ ಏರ್ಮಾಳು ಇವರಿಗೆ ಪದೋನ್ನತಿ

ಉಡುಪಿಯ ಅಜ್ಜರಕಾಡು ಭಾರತೀಯ ಜೀವ ವಿಮಾ ನಿಗಮದಲ್ಲಿ ಉದ್ಯೋಗಿಯಾಗಿರುವ ಶ್ರೀ ವೈ. ವಿಠಲರಾವ್ ಇವರು ಎ.ಡಿ.ಎಮ್. (ಅಸಿಸ್ಟೆಂಟ್ ಡಿವಿಜನಲ್ ಮೆನೇಜರ್) ಆಗಿ ನೇಮಕಗೊಂಡಿದ್ದಾರೆ. ಇವರಿಗೆ ಶ್ರೀಶಾರದಾ ಅಭಿನಂದನೆಗಳು.

### ಕುಮಾರಿ ಚೈತ್ರ



**ಭರತನಾಟ್ಯ ವಿಭಾಗದಲ್ಲಿ ರಾಜ್ಯಕ್ಕೆ ಪ್ರಥಮ ಎಸ್.ಎಸ್.ಎಲ್.ಸಿ.ಯಲ್ಲಿ 95%**

2008ನೇ ಸಾಲಿನ ಪ್ರತಿಭಾ ಕಾರಂಜಿ ಸ್ಪರ್ಧೆಯ ಭರತನಾಟ್ಯ ವಿಭಾಗದಲ್ಲಿ ಕು। ಚೈತ್ರ ರಾಜ್ಯಕ್ಕೆ ಪ್ರಥಮ ಸ್ಥಾನವನ್ನು ಪಡೆದಿರುತ್ತಾಳೆ. ಈಕೆ ಭರತನಾಟ್ಯ ಹಾಗೂ ಕರ್ನಾಟಕ ಸಂಗೀತ ವಿಭಾಗಗಳಲ್ಲಿ ಸೀನಿಯರ್ ಪರೀಕ್ಷೆಯಲ್ಲಿ ತೇರ್ಗಡೆಯಾಗಿರುತ್ತಾಳೆ. ಈಕೆ ಉಡುಪಿಯ ಟಿ.ಎ.ಪೈ ಇ.ಎಮ್.ಎಚ್. ಸ್ಕೂಲಿನ ವಿದ್ಯಾರ್ಥಿನಿ ಯಾಗಿದ್ದು ಈ ವರ್ಷದ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ 625ರಲ್ಲಿ 594 ಅಂಕಗಳಿಸಿ ವಿಶಿಷ್ಟ ಶ್ರೇಣಿಯಲ್ಲಿ ತೇರ್ಗಡೆಯಾಗಿರುತ್ತಾಳೆ. ಕುದುರೆಮುಖದ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದಲ್ಲಿ ಉದ್ಯೋಗಿಯಾಗಿರುವ ಶ್ರೀ ಪೆರ್ಣಂಕಿಲ ಶ್ರೀನಿವಾಸರಾವ್ ಮತ್ತು ಮಣಿಪಾಲ ಬಿ.ಎಸ್.ಎನ್.ಎಲ್.ನಲ್ಲಿ ಉದ್ಯೋಗಿ ಯಾಗಿರುವ ಶ್ರೀಮತಿ ಆಶಾಲತಾ ಇವರ ಸುಪುತ್ರಿಯಾದ ಕುಮಾರಿ ಚೈತ್ರಳ ಈ ಸಾಧನೆಗೆ ಶ್ರೀಶಾರದಾ ಅಭಿನಂದನೆಗಳು.

### ವಿಳಾಸ ಬದಲಾವಣೆ

KEDIGE VASANTHA RAO
#101, Shivam, SaiMahal Apt.
C. G.Kamath Road, Karangalpady,
Mangalore -575003.
Tel. :0824-2497633

★★★★

M. R. VASUDEVA
Airport Director
Airport Director's Quarters
Civil Aerodrome Road,
Coimbatore - 641 014.
Tel. :0422-2572762

## ಗೃಹಪ್ರವೇಶ

ಶ್ರೀಮತಿ ಉಷಾ ಹಾಗೂ ಶ್ರೀ ವೈ. ಮೋಹನ ರಾವ್ ಮತ್ತು ಮಕ್ಕಳು ಶಾಮಿಲಿ ಸಭಾಂಗಣದ ಬಳಿ ಶ್ರೀ ಪ್ರಸನ್ನ ಗಣಪತಿ ಮಂದಿರ ರಸ್ತೆ, ಅಂಬಲಪಾಡಿ, ಉಡುಪಿಯಲ್ಲಿ ನಿರ್ಮಿಸಿದ ನೂತನ ಗೃಹ 'ದೃಷ್ಟಿ' ಇದರ ಪ್ರವೇಶೋತ್ಸವವನ್ನು ತಾ.8-5-2009 ರಂದು ನೆರವೇರಿಸಿದರು.

★★★★

ಶ್ರೀಮತಿ ಉಷಾ ಹಾಗೂ ಶ್ರೀ ಯು. ಕೆ. ಪ್ರವೀಣ್ ಇವರು ಆರ್ಯಸಮಾಜ ರಸ್ತೆ, ಕದ್ರಿ, ಮಂಗಳೂರಿನ ಆರ್ಚಡ್ ಅಪಾರ್ಟ್‌ಮೆಂಟ್‌ನ ಫ್ಲ್ಯಾಟ್ ನಂ.1105ರಲ್ಲಿ ನೂತನವಾಗಿ ನಿರ್ಮಿಸಿದ 'ಜಯಕೃಷ್ಣ' ಇದರ ಪ್ರವೇಶೋತ್ಸವವನ್ನು ತಾ30-4-2009ರಂದು ನೆರವೇರಿಸಿದರು.

## ಸಹಸ್ರಚಂದ್ರದರ್ಶನ ಶಾಂತಿ

ಪಡುಬಿದ್ರಿಯ ದಿ। ಎಂ.ಕೆ. ಗೋಪಾಲಕೃಷ್ಣ ರಾವ್‌ರವರ ಧರ್ಮಪತ್ನಿ ಶ್ರೀಮತಿ ಲಕ್ಷ್ಮೀ ಅಮ್ಮನವರಿಗೆ ಸಹಸ್ರ ಚಂದ್ರದರ್ಶನ ಶಾಂತಿಯನ್ನು ತಾ.9-5-2009ನೇ ಶನಿವಾರ ಪಡುಬಿದ್ರಿಯ ಅವರ ಮನೆ ನಂದಗೋಕುಲದಲ್ಲಿ ಅವರ ಮಕ್ಕಳಾದ ಶ್ರೀ ಎಂ.ಕೆ.ಮೋಹನ ರಾವ್ ಮತ್ತು ಸಹೋದರರು ನೆರವೇರಿಸಿದರು.

## ವೈದ್ಯಕೀಯ ವೇದಿಕೆ-ಪ್ರಶ್ನೆ ಮತ್ತು ಉತ್ತರ

**ಪ್ರಶ್ನೆ ಕೇಳಿದವರು : ಶ್ರೀ ವೈ. ಮೋಹನ ರಾವ್** **ಉತ್ತರಿಸಿದವರು : ಡಾ। ವೈ. ಸುದರ್ಶನ ರಾವ್**

**ಪ್ರಶ್ನೆ : ಸೆಬೇಸಿಯಸ್ ಸಿಸ್ಟ್ ಅಂದರೇನು? ಇದರಿಂದ ಮುಂದೆ ಏನು ತೊಂದರೆಯಾಗಬಹುದು? ಹಾಗೂ ಇದರ ಚಿಕಿತ್ಸೆ ಏನು?**

**ಉತ್ತರ :** ಇದೊಂದು ಚರ್ಮದ ಕೆಳಗೆ ಬೆಳೆಯುವ, ಮೂಲತಃ ರೋಮಕುಹರದ ಕೋಶದ ಸಣ್ಣ ಗಡ್ಡೆ. ಇದು ದೇಹದ ಯಾವುದೇ ಭಾಗದಲ್ಲಿ ಕಂಡುಬರಬಹುದು. ಆರಂಭದಲ್ಲಿ ಸಣ್ಣ ಬಟಾಣಿ ಕಾಳಿನ ಚೀಲದಂತಿದ್ದು, ನಿಧಾನವಾಗಿ ಯಾವ ಗಾತ್ರಕ್ಕೂ ಬೆಳೆಯಬಲ್ಲವು. ಅದರೊಳಗೆ ಕೆಟ್ಟ ವಾಸನೆ ಬೀರುವ ಪೇಸ್ಟಿನಂತಹ ವಸ್ತು ಇರುತ್ತದೆ. ಮುಟ್ಟಿ ನೋಡಲು ಉರುಟಾಗಿ, ಮೆತ್ತಗೆ, ನೋವಿಲ್ಲದೆ ನಿರುಪದ್ರವಿಯಂತಿರುವುದು. ಗಡ್ಡೆಯ ಮೇಲಿನ ಚರ್ಮ ಸ್ವಲ್ಪ ಉಬ್ಬಿಕೊಂಡಿದ್ದು, ಉಬ್ಬಿದ ಭಾಗದ ತುದಿಯಲ್ಲಿ ಕಪ್ಪು ಬಣ್ಣದ ಸೂಜಿಮೊನೆ ಗಾತ್ರದ ಒಂದು ಬೊಟ್ಟು ಇರುವುದು. ಕೆಲವೊಮ್ಮೆ ಈ ಗುಳ್ಳೆಯನ್ನು ಹಿಚುಕಿದರೆ ಆ ಪೇಸ್ಟಿನಂತಹ ವಸ್ತು ಈ ಕಪ್ಪು ಬೊಟ್ಟು ಇದ್ದಲ್ಲಿಂದ ಹೊರಗೆ ಬರುವುದು.

ಏನೋ ಗಡ್ಡೆಯಿದೆಯೆಂಬ ಭಯ ಹಾಗೂ ದೊಡ್ಡ ಗಾತ್ರಕ್ಕೆ ಬೆಳೆದಿದ್ದರೆ ಆ ಗಾತ್ರದಿಂದಾಗುವ ಕೆಲವು ತೊಂದರೆಗಳನ್ನು ಬಿಟ್ಟರೆ ಈ ಗಡ್ಡೆಯಿಂದ ದೇಹಕ್ಕೇನು ಹಾನಿಯಾಗುವುದಿಲ್ಲ. ಆದರೂ ಕೆಲವೊಮ್ಮೆ ವಿಶೇಷತಃ ಸಿಹಿಮೂತ್ರ ರೋಗಿಗಳಲ್ಲಿ, ಇದರೊಳಗೆ ಬಾಕ್ಟೀರಿಯಾಗಳು ಸೇರಿಕೊಂಡು ಕೀವು ಆಗುವುದಿದೆ. ಮುಂದೆ ಇದೇ ಗಡ್ಡೆ ಕ್ಯಾನ್ಸರ್ ಆಗಿ ಬದಲಾಗುವ ಸಾಧ್ಯತೆ ತೀರಾ ಕಡಿಮೆ.

ಗಾರ್ಡನರ್ಸ್ ಸಿಂಡ್ರೋಮ್ ಎಂಬ ಅನುವಂಶಿಕ ಖಾಯಿಲೆಯಲ್ಲಿ ಮೈಮೇಲೆ ಇಂತಹ ಹತ್ತಾರು ಗಡ್ಡೆಗಳಿರಬಹುದು. ಈ ಗಡ್ಡೆಗೆ ಶಸ್ತ್ರಚಿಕಿತ್ಸೆ ಬಿಟ್ಟು ಬೇರೆ ಚಿಕಿತ್ಸೆ ಇಲ್ಲ. ಗಡ್ಡೆ ಬೆಳೆದ ಜಾಗಕ್ಕೆ ನೋವಿನ ಅರಿವು ತಪ್ಪಿಸುವ ಚುಚ್ಚುಮದ್ದು ಕೊಟ್ಟು ಅದನ್ನು ಕತ್ತರಿಸಿ ತೆಗೆದು ಹೊಲಿಗೆ ಹಾಗುವ ವಿಧಾನ ತುಂಬಾ ಸರಳವಾದದ್ದು. ಒಂದು ವೇಳೆ ಈ ಗಡ್ಡೆಯಲ್ಲಿ ಕೀವು ತುಂಬಿದ್ದರೆ ಮೊದಲು ಕೀವು ತೆಗೆದು ಕೆಲವು ದಿನಗಳ ನಂತರ ಕೀವು ಗುಣವಾದ ಮೇಲೆ ಮೇಲೆ ಹೇಳಿದ ಶಸ್ತ್ರಚಿಕಿತ್ಸೆಯನ್ನು ಗಡ್ಡೆ ತೆಗೆಯುವುದಕ್ಕಾಗಿ ಮಾಡಬೇಕಾಗುತ್ತದೆ.

ಈ ಗಡ್ಡೆ ಬಾರದಂತೆ ಮಾಡಲು ಯಾವುದೇ ಉಪಾಯ ಇಲ್ಲ.

**ಆರೋಗ್ಯ ಮಾಹಿತಿಯ ಬಗ್ಗೆ ಪ್ರಶ್ನೆಗಳನ್ನು ಎಸ್.ಎಮ್.ಎಸ್.ಮೂಲಕವೂ ತಿಳಿಸಬಹುದು.**
**ಸಂಚಾರಿ ದೂರವಾಣಿ ನಂ. : 98451 36322**

## ಬ್ರಹ್ಮೋಪದೇಶ

### ಚಿ। ಆದಿತ್ಯ

ಬೈಕಾಡಿ ಶ್ರೀ ಶಂಕರನಾರಾಯಣ ಹಾಗೂ ಶ್ರೀಮತಿ ಪುಷ್ಪಲತಾ ಇವರ ಪುತ್ರ ಆದಿತ್ಯನ ಬ್ರಹ್ಮೋಪದೇಶವು ತಾ.30-4-2009ರಂದು ಬೆಂಗಳೂರಿನ ಬುಲ್‌ಟೆಂಪಲ್ ರಸ್ತೆಯಲ್ಲಿರುವ ಶ್ರೀ ಪುತ್ತಿಗೆ ಮಠದಲ್ಲಿ ನೆರವೇರಿತು.

★★★★

### ಚಿ। ಅಮಿತೇಶ್

ನಾಸಿಕ್‌ನಲ್ಲಿರುವ ಶ್ರೀಮತಿ ಭಾರತಿ ಹಾಗೂ ಶ್ರೀ ಚಂದ್ರಶೇಖರರಾವ್ ಕರಂದಾಡಿ ಇವರ ಪುತ್ರ ಅಮಿತೇಶ್‌ನ ಬ್ರಹ್ಮೋಪದೇಶವು ತಾ.1-5-2009 ರಂದು ಉಡುಪಿ ಕುಂಜಿಬೆಟ್ಟು ಶ್ರೀ ಶಾರದಾ ಮಂಟಪದಲ್ಲಿ ನೆರವೇರಿತು.

★★★★

### ಚಿ। ವೆಂಕಟೇಶ

ಸಾಸ್ತಾನ ಪಾಂಡೇಶ್ವರದ ದಿ। ನಾಗೇಂದ್ರ ರಾಯರ ಪುತ್ರ ವೆಂಕಟೇಶನ ಬ್ರಹ್ಮೋಪದೇಶವು ತಾ.3-5-2009ರಂದು ಸಾಸ್ತಾನ ಎಡಬೆಟ್ಟು ಶ್ರೀ ಬ್ರಹ್ಮಲಿಂಗೇಶ್ವರ ದೇವರ ಸನ್ನಿಧಿಯಲ್ಲಿ ನೆರವೇರಿತು.

★★★★

### ಚಿ। ಹರ್ಷಲ್

ಮುಂಬೈ ಚೆಂಬೂರುನಲ್ಲಿರುವ ಶ್ರೀಮತಿ ಮಮತಾ ಹಾಗೂ ಶ್ರೀ ಸದಾಶಿವ ರಾವ್ ಇವರ ಪುತ್ರ ಹರ್ಷಲ್‌ನ ಬ್ರಹ್ಮೋಪದೇಶವು ತಾ.4-5-2009ರಂದು ಮುಂಬೈ ಸಯಾನಿನಲ್ಲಿರುವ ಗೀತ ಗೋವಿಂದ ಹಾಲ್‌ನಲ್ಲಿ ನೆರವೇರಿತು.

★★★★

### ಚಿ। ನಿದೀಶ್

ನಾಸಿಕ್‌ನಲ್ಲಿರುವ ಶ್ರೀಮತಿ ವಿದ್ಯಾಲಕ್ಷ್ಮಿ ಹಾಗೂ ಶ್ರೀ ಬಿ. ನಾರಾಯಣರಾವ್ ಚಿಟ್ಪಾಡಿ ಇವರ ಪುತ್ರ ನಿದೀಶ್‌ನ ಬ್ರಹ್ಮೋಪದೇಶವು ತಾ.6-5-2009ರಂದು ಉಡುಪಿ ಚಿಟ್ಪಾಡಿಯ ಸ್ವಗೃಹ 'ಶಾಂತಿ ನಿಲಯ'ದಲ್ಲಿ ನೆರವೇರಿತು.

### ಚಿ। ಸ್ಫೂರ್ತಿ

ಸಾಭಿಮನೆ ಶ್ರೀಮತಿ ಮಹಾಲಕ್ಷ್ಮೀ ಮತ್ತು ಶ್ರೀ ವಿಷ್ಣುಮೂರ್ತಿ ಶ್ಯಾನುಭೋಗ ತಂತ್ರಾಡಿ ಇವರ ಸುಪುತ್ರ ಸ್ಫೂರ್ತಿಯ ಬ್ರಹ್ಮೋಪದೇಶವು ತಾ.19-4-2009ರಂದು ತಂತ್ರಾಡಿಯ ಸ್ವಗೃಹದಲ್ಲಿ ನೆರವೇರಿತು.

★★★★

### ಚಿ। ಧ್ಯಾನ್

ನಂದಿಕೂರು ಎಸ್. ದಿನಕರ ರಾವ್ ಮತ್ತು ಶ್ರೀಮತಿ ಸ್ವಪ್ನ ಎಸ್.ಡಿ.ರಾವ್ ಇವರ ಪುತ್ರ ಧ್ಯಾನ್‌ನ ಬ್ರಹ್ಮೋಪದೇಶವು ತಾ.30-4-2009ರಂದು ಪುತ್ತೂರು ಶ್ರೀಮಹಾಲಿಂಗೇಶ್ವರ ಸಭಾಭವನದಲ್ಲಿ ನೆರವೇರಿತು.

★★★★

### ಚಿ। ಅನಿಕೇತ್ ಮತ್ತು ಚಿ। ಸಾಹಿಲ್

ಶ್ರೀಮತಿ ಗಾಯತ್ರಿ ಮತ್ತು ಶ್ರೀ ಸುಗುಣ್ ಕುಮಾರ್ ರಾವ್ ಇವರ ಪುತ್ರ ಅನಿಕೇತ್ ಹಾಗೂ ಡಾ। ಶ್ರೀಮತಿ ಸ್ಮಿತಾ ಹಾಗೂ ಡಾ। ನಂದಕಿಶೋರ್ ಬಿ. ರಾವ್ ಇವರ ಪುತ್ರ ಸಾಹಿಲ್ ಇವರ ಬ್ರಹ್ಮೋಪದೇಶವು ತಾ.6-5-2009ರಂದು ಮಂಗಳೂರಿನ ಸುಬ್ರಹ್ಮಣ್ಯ ಸಭಾದಲ್ಲಿ ನೆರವೇರಿತು.

★★★★

### ಚಿ। ಗಿರೀಶ್

ಕಾರ್ಕಳ ತಾಲೂಕು ಹೊಸ್ಮಾರು ನೂರಾಲ್‌ಬೆಟ್ಟಿನ ಶ್ರೀ ಲಕ್ಷ್ಮೀಕಾಂತ್ ಹಾಗೂ ಶ್ರೀಮತಿ ವಿಜಯ ಇವರ ಪುತ್ರ ಗಿರೀಶನ ಬ್ರಹ್ಮೋಪದೇಶವು ತಾ.30-4-2009ರಂದು ಉಡುಪಿ ಕುಂಜಿಬೆಟ್ಟು ಶ್ರೀಶಾರದಾ ಮಂಟಪದಲ್ಲಿ ನೆರವೇರಿತು.

★★★★

### ಚಿ। ರಾಜದೀಪ್

ಮಂಗಳೂರು ದೇರ್ಲಕಟ್ಟೆ ತಿಲಕನಗರದ ಶ್ರೀ ರಾಧಾಕೃಷ್ಣರಾವ್ ಹಾಗೂ ಧನಲಕ್ಷ್ಮೀಯವರ ಪುತ್ರ ರಾಜದೀಪ್‌ನ ಬ್ರಹ್ಮೋಪದೇಶವು ತಾ.30-4-2009ರಂದು ಉಡುಪಿ ಕುಂಜಿಬೆಟ್ಟು ಶ್ರೀಶಾರದಾ ಮಂಟಪದಲ್ಲಿ ನೆರವೇರಿತು.


**ಅರ್ಚಕರು ಬೇಕಾಗಿದ್ದಾರೆ**

**ಶ್ರೀ ಶಾರದಾ ದೇವಸ್ಥಾನ, ಕುಂಜಿಬೆಟ್ಟು, ಉಡುಪಿ**

ಶ್ರೀ ಶಾರದಾ ದೇವಸ್ಥಾನಕ್ಕೆ ಪೂಜಾ ವಿಧಿ-ವಿಧಾನಗಳನ್ನು ಬಲ್ಲ ಓರ್ವ ಅರ್ಚಕರು ಬೇಕಾಗಿದ್ದಾರೆ. ಅರ್ಚಕರಿಗೆ ವಾಸ್ತವ್ಯಕ್ಕೆ ಮನೆ ವ್ಯವಸ್ಥೆಯಿದ್ದು, ಪೂರ್ಣಾವಧಿ ಶ್ರೀ ಶಾರದಾ ದೇವಸ್ಥಾನದಲ್ಲಿ ಇರಬೇಕಾಗುತ್ತದೆ.

*ಆಸಕ್ತರು ಕೂಡಲೇ ವಿವರಗಳೊಂದಿಗೆ ಸಂಪರ್ಕಿಸಿರಿ :*

**ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.), ಕುಂಜಿಬೆಟ್ಟು , ಉಡುಪಿ-2.**

**ದೂರವಾಣಿ : 0820-2520754**

**ರಾಮಾ ಅಟೋಮೊಬೈಲ್ಸ್**

ಮಾರುತಿ ವಾಹನ ತಜ್ಞರು

ಮಲೆಮಾರ್ ರಸ್ತೆ, ಕೊಟ್ಟಾರ ಚೌಕಿ, ಮಂಗಳೂರು - 575 006.

**ಫೋನ್ : 2454355, ಮೊಬೈಲ್ : 94485 45702**


ಪ್ರೊ : ಯು. ಸಂತೋಷ ಕುಮಾರ್, ಉಜ್ಜೋಡಿ


ಉಡುಪಿ ವಿಶಿಷ್ಟ ರುಚಿಯುಳ್ಳ

**Rao's 'ಮಾತೃಛಾಯಾ'ರವರ**

ಸಾರಿನ ಹಾಗೂ ಸಾಂಬಾರ್ ಮಸಾಲೆ, ಅಪ್ಪಿಮಿಡಿ ಹಾಗೂ ಮಿಡಿ ಉಪ್ಪಿನಕಾಯಿ ಹಪ್ಪಳ ಹಾಗೂ ಸೆಂಡಿಗೆಗಳು, ಶುದ ದನದ ತುಪ್ಪ ಹಾಗೂ ಜೇನು ತುಪ್ಪ

**-: ಮೊದಲಾದ ನಿತ್ಯೋಪಯೋಗಿ ವಸ್ತುಗಳಿಗೆ ಸಂದರ್ಶಿಸಿರಿ :-**

**ಭಾರತ್ ಸ್ಟೋರ್ಸ್**

**ರಥಬೀದಿ, ಉಡುಪಿ - 576 101. ಫೋನ್ : 2522444**

**SRI SUBRAHMANYA SEVA SANGHA**

B/1/14, Shubhkarma Co-op. Hsg. Soc. Ltd., Karmakshetra, S.S.S. Nagar, Sion Koliwada, Mumbai -400 037.
Tel. :65242852

Sri Subrahmanya Seva Sangha, Mumbai Awards (as in every year) the following prizes to students (of Stanika Community) who have scored the highest aggregate marks in the final examination held by any of the Maharashtra Boards in the year 2008.

1) Two Prizes of Rs.4,000/- each to a girl and a boy student in HSC (Science)
2) Two Prizes of Rs.2,000/- each to a girl and a boy student in HSC (Arts) and
3) Two Prizes of Rs.2,000/- each to a girl and a boy student in HSC (Commerce)

The applications along with the certified mark lists should reach the Hon. Secretary, Sri Subrahmanya Seva Sangha, B/1/14, Shubhkarma CHS, Karmashera, Koliwada, Sion (East), Mumbai 400 037. Tel. :26786087/9221466126 by 6th June, 2009. The Prizes will be awarded on the occasion of AGM to be held on 14th June 2009 at Samarasa Bhavana, Karnataka Sangha, Matunga, W .Rly., Mumbai -400 016. These prizes are instituted by Santurkar Brothers (S.S.Purushotam V.Santurkar and Sarvottam V.Santurkar) and their families in memory of late Shri Santur Venkatrao"

-B. Sateesh Kumar, Hon. Secretary

**Business Opportunities**

*An established running, consumer products wholesale and retail distribution unit is for sale at Mangalore.*

THERE IS AMPLE SCOPE FOR EXPANSION.

Interested please contact :
MR. SUDARSHAN N
Cell No. :0 94482 68560

**ವಧು-ವರರ ವೇದಿಕೆ**

**ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.), ಕುಂಜಿಬೆಟ್ಟು, ಉಡುಪಿ.**

ಸಮಾಜದ ವಿವಾಹ ಯೋಗ್ಯ ವಧು-ವರರ ನೋಂದಾವಣೆ, ವಿವಿಧ ಮಾಹಿತಿ ಮೊದಲಾದವುಗಳನ್ನು ಆಸಕ್ತ ಹೆತ್ತವರು ಪಡೆದುಕೊಂಡು ಪರಸ್ಪರ ವಿಚಾರ ವಿನಿಮಯ ಮಾಡಲು ಅವಕಾಶವಿದೆ. ಸಮಾಜ ಬಾಂಧವರು ವೇದಿಕೆಯ ಸದುಪಯೋಗ ಪಡೆದುಕೊಳ್ಳಬೇಕಾಗಿ ವಿನಂತಿ.

- ಅಧ್ಯಕ್ಷರು, ವಧೂವರರ ವೇದಿಕೆ, ಶ್ರೀಶಾರದಾ ಮಂಟಪ, ಕುಂಜಿಬೆಟ್ಟು, ಉಡುಪಿ

**ದೇವಿಕೃಪಾ ಏಜೆನ್ಸೀಸ್, ನಂದಿಕೂರು**



ಫೋನ್ : 2556536 (R), 2555466 (0)

**ಶಾಂತಲಾ 100 ಅಗರ್ ಬತ್ತಿಯ ಮುಖ್ಯ ವಿತರಣೆಗಾರರು ಹಾಗೂ ಕರ್ಪೂರ, ಲೋಬಾನ ಮುಂತಾದವುಗಳ ರಖಂ ವ್ಯಾಪಾರಸ್ಥರು.**

**ಪ್ರೊ। ಎಸ್. ಜನಾರ್ದನ್ ರಾವ್**
ದೇವಿಕೃಪಾ, ನಂದಿಕೂರು, ಉಡುಪಿ ತಾಲೂಕು

**ಎಲ್ಲಾ ತರಹದ ಸುಖಕರ ಪ್ರವಾಸ-ಪ್ರಯಾಣಕ್ಕಾಗಿ ವಿಚಾರಿಸಿರಿ**

**ಸಮಾಜ ಬಾಂಧವರಿಗೆ ವಿಶೇಷ ರಿಯಾಯಿತಿ ಸೌಲಭ್ಯ**

**ಶ್ರೀ ''ಕುಂಕುಂ'' ಟೂರ್ಸ್**

ಐಡಿಯಲ್ ಕಾಂಪ್ಲೆಕ್ಸ್, ಅಲೆವೂರು ರೋಡ್, ಶಾಂತಿನಗರ,



ಮಣಿಪಾಲ - 576 104.

ಫೋನ್ : 99454 14338




Owned & Published by : K. Venugopal Rao, Secretary Sthanika Dravida Brahmana Sangha (R.), Shri Sharada Mantapa, Kunjibettu, Udupi - 576 102. Ph : 0820-2520754